KARNATAKA STATE LEGAL SERVICES AUTHORITY, BENGALURU

# N O T I F I C A T I O N

**NO: KSLSA/03/ADM/SO/2026 DATED 20.07.2026**

# DIRECT RECRUITMENT OF THE CANDIDATES TO THE POSTS OF SECTION OFFICER

**UNDER RESIDUAL PARENT CADRE & KALYANA KARNATAKA REGION**

| | |
|---|---|
| **COMMENCEMENT OF ONLINE APPLICATION** | **20.07.2026** |
| **LAST DATE FOR SUBMISSION OF APPLICATION THROUGH ONLINE** | **19.08.2026 (11:59 p.m.)** |

It is hereby notified that the online application is invited from the candidate, who fulfills the essential qualification and other eligibility conditions prescribed by the Authority, for recruitment of **18 posts of Section Officer under Residual Parent Cadre** and **02 posts under Kalyana Karnataka Region,** by way of Direct Recruitment in the Karnataka State Legal Services Authority.

For details regarding classification of vacancies, scale of pay, method of recruitment, examination, interview, qualification, age limit, application fee, probation, method of selection, general instructions, eligibility criteria, procedure for submitting application through online, reservation etc., please refer the detailed information provided in **Karnataka Examinations Authority Website https://cetonline.karnataka.gov.in/kea/indexnew or Karnataka State Legal Services Authority Website : https://karnataka.nalsa.gov.in.**

**Sd/-**
**(H. SHASHIDHARA SHETTY)**
Member Secretary,
KSLSA, Bengaluru

# ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು.

**ಅ ಧಿ ಸೂ ಚ ನೆ**

**ಸಂಖ್ಯೆ: ಕರಾಕಾಸೇಪ್ರಾ:03/ಎಡಿಎಮ್/ಎಸ್ಒ/2026 ದಿನಾಂಕ 20ನೇ ಜುಲೈ 2026**

# ಶಾಖಾಧಿಕಾರಿ ಹುದ್ದೆಗಳಿಗಾಗಿ ಅಭ್ಯರ್ಥಿಗಳ ನೇರ ನೇಮಕಾತಿ

**ಉಳಿದ ಮೂಲ ವೃಂದದಲ್ಲಿ ಮತ್ತು ಕಲ್ಯಾಣ ಕರ್ನಾಟಕ ವೃಂದದಲ್ಲಿ**

| | |
|---|---|
| **ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ ಆರಂಭ** | **20.07.2026** |
| **ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ** | **19.08.2026 (11:59 p.m.)** |

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ **18 ಶಾಖಾಧಿಕಾರಿ ಹುದ್ದೆಗಳಿಗೆ ಉಳಿದ ಮೂಲ ವೃಂದದಡಿಯಲ್ಲಿ** ಮತ್ತು **02 ಶಾಖಾಧಿಕಾರಿ ಹುದ್ದೆಗಳಿಗೆ ಕಲ್ಯಾಣ ಕರ್ನಾಟಕ ವೃಂದದಡಿಯಲ್ಲಿ** ನೇರ ನೇಮಕಾತಿಗಾಗಿ ಅರ್ಜಿಯನ್ನು ನಿಗಧಿಪಡಿಸಿರುವ ಅಗತ್ಯ ಮತ್ತು ಇತರೆ ಅರ್ಹತಾ ಷರತ್ತುಗಳನ್ನು ಪೂರೈಸುವ ಅಭ್ಯಥಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದೆಂದು ಅಧಿಸೂಚಿಸಲಾಗಿದೆ.

ಖಾಲಿ ಹುದ್ದೆಗಳ ವರ್ಗೀಕರಣ, ವೇತನ ಶ್ರೇಣಿ, ನೇಮಕಾತಿ ವಿಧಾನ, ಸ್ಪರ್ಧಾತ್ಮಕ ಪರೀಕ್ಷೆ, ಸಂದರ್ಶನ, ಅರ್ಹತೆ, ವಯಸ್ಸಿನ ಮಿತಿ, ಅರ್ಜಿ ಶುಲ್ಕ, ಸೇವಾ ಪರಿವೀಕ್ಷಣಾ ಅವಧಿ, ಆಯ್ಕೆ ವಿಧಾನ, ಸಾಮಾನ್ಯ ಸೂಚನೆಗಳು, ಅರ್ಹತಾ ಮಾನದಂಡಗಳು, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ವಿಧಾನ, ಮೀಸಲಾತಿ ಇತ್ಯಾದಿಗಳ ಕುರಿತು ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು **ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ https://cetonline.karnataka.gov.in/kea/indexnew** ಅಥವಾ **ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ವೆಬ್‌ಸೈಟ್: https://karnataka.nalsa.gov.in** ನಲ್ಲಿ ನೀಡಲಾದ ವಿವರವಾದ ಮಾಹಿತಿಯನ್ನು ನೋಡಬಹುದು.

**ಸಹಿ/-**
**(ಹೆಚ್. ಶಶಿಧರ ಶೆಟ್ಟಿ)**
ಸದಸ್ಯ ಕಾರ್ಯದರ್ಶಿ,
ಕ.ರಾ.ಕಾ.ಸೇ.ಪ್ರಾ., ಬೆಂಗಳೂರು

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ –೧೬೧<br>Volume - 161 | ಬೆಂಗಳೂರು, ಸೋಮವಾರ, ೨೦, ಜುಲೈ, ೨೦೨೬ (ಆಷಾಢ, ೨೯, ಶಕವರ್ಷ, ೧೯೪೮)<br>BENGALURU, MONDAY, 20, JULY, 2026 (ASHADHA, 29, SHAKAVARSHA, 1948) | ಸಂಚಿಕೆ ೧೪೦<br>Issue 140 |
|---|---|---|

ಭಾಗ ೫

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು


## KARNATAKA STATE LEGAL SERVICES AUTHORITY, BENGALURU

## NOTIFICATION

**NO: KSLSA/O3/ADM/SO/2026DATED 20.07.2026**

**DIRECT RECRUITMENT OF THE CANDIDATES TO THE POSTS OF SECTION OFFICER**

**UNDER RESIDUAL PARENT CADRE**

**LAST DATE FOR SUBMISSION OF APPLICATION THROUGH ONLINE: 19.08.2026**

It is hereby notified that the online application is invited from the candidate, who fulfills the essential qualifications and other eligibility conditions prescribed below, for recruitment of **18** posts of **Section Officer**,by way of Direct Recruitment under Residual Parent Cadre in the Karnataka State Legal Services Authority, Bengaluru.

**This Notification/Recruitment is subject to the final outcome of Writ Petition No.200448/2025 c/w 17968/2025 and 3145/2023 pending before the Hon'ble High Court of Karnataka.**

## PART - A

### 1. Classification of vacancies:

**18 POSTS UNDER RESIDUAL PARENT CADRE**

<table>
<tr><th colspan="2">Category</th><th>Un-reserved</th><th>Women Candidate</th><th>Rural Candidate</th><th>Kannada Medium Candidate</th><th>Persons with Benchmark Disability</th><th>Ex-servicemen</th><th>Transgender</th><th colspan="2">TOTAL</th></tr>
<tr><td colspan="2">General Merit</td><td>02</td><td>03</td><td>03</td><td>-</td><td>01*</td><td>-</td><td>-</td><td colspan="2">09</td></tr>
<tr><td colspan="2">Scheduled Castes (Cat-A)</td><td>01</td><td>-</td><td>-</td><td>-</td><td>-</td><td>-</td><td>-</td><td>01</td><td rowspan="4">03</td></tr>
<tr><td colspan="2">Scheduled Castes (Cat-B)</td><td>01</td><td>-</td><td>-</td><td>-</td><td>-</td><td>-</td><td>-</td><td>01</td></tr>
<tr><td rowspan="2">Scheduled Castes (Cat-C)</td><td>Others</td><td>-</td><td>-</td><td>-</td><td>-</td><td>-</td><td>-</td><td>-</td><td rowspan="2">01</td></tr>
<tr><td>MBC **</td><td>01</td><td>-</td><td>-</td><td>-</td><td>-</td><td>-</td><td>-</td></tr>
<tr><td colspan="2">Scheduled Tribes</td><td>01</td><td>-</td><td>-</td><td>-</td><td>-</td><td>-</td><td>-</td><td colspan="2">01</td></tr>
<tr><td colspan="2">Category-I</td><td>01</td><td>-</td><td>-</td><td>-</td><td>-</td><td>-</td><td>-</td><td colspan="2">01</td></tr>
<tr><td colspan="2">Category-II(A)</td><td>01</td><td>01</td><td>-</td><td>-</td><td>-</td><td>-</td><td>-</td><td colspan="2">02</td></tr>
<tr><td colspan="2">Category-II(B)</td><td>01</td><td>-</td><td>-</td><td>-</td><td>-</td><td>-</td><td>-</td><td colspan="2">01</td></tr>
<tr><td colspan="2">Category-III(A)</td><td>01</td><td>-</td><td>-</td><td>-</td><td>-</td><td>-</td><td>-</td><td colspan="2">01</td></tr>
<tr><td colspan="2">Category-III(B)</td><td>-</td><td>-</td><td>-</td><td>-</td><td>-</td><td>-</td><td>-</td><td colspan="2">-</td></tr>
<tr><td colspan="2">TOTAL</td><td>10</td><td>04</td><td>03</td><td>-</td><td>01*</td><td>-</td><td>-</td><td colspan="2">18</td></tr>
</table>

**Note:**

1. The classification is made on the basis of Government Order No. DPAR 02 SeHiMa 2026 dated 13.05.2026 and Government Order No. SWD 8 SLP 2024 (Part-1), dated: 22.05.2026.

2. **(*)** Indicates the classification of vacancies for Persons with Benchmark Disability made as per Government Order No.DPAR 149 SRR 2020 dated 25.09.2020, the details are as under:

3. **(**)**Indicates Most Backward Class.

| Category | Horizontal Reservation | Nature of Disability |
|---|---|---|
| General Merit | Point No. 4 | Blindness and low vision |

## 2. Scale of Pay:

69250-1650-74200-1900-85600-2300-99400-2700-115600-3100-134200

## 3. Method of Recruitment:

Selection of candidates will be made in accordance with;

a) The Legal Services Authorities Act, 1987.

b) The Karnataka State Legal Services Authority Rules, 1996.

c) The Karnataka State Legal Services Authority Regulations, 1997.

d) The Karnataka Civil Services (General Recruitment) Rules, 1977, as amended from time to time.

e) The Karnataka Scheduled Castes, Scheduled Tribes and other Backward Classes (Reservation of Appointment, etc.) Act, 1990.

f) The Karnataka Scheduled Castes, Scheduled Tribes and other Backward Classes (Reservation of Appointment, etc,) Rules, 1992.

g) The Government Circulars/Notifications are as under:

| Sl. No. | Government Circulars / Notifications | Date | Subject |
|---|---|---|---|
| 1. | DPAR 262 SRR 2025 | 29.01.2026 | Providing Age Relaxation of 5 years (as a one time measure) |
| 2. | DPAR 08 SRR 2001 | 13.02.2001 | Regarding candidate claiming Rural Reservation |
| 3. | DPAR 19 SRR 2020 | 12.10.2020 | Regarding No Objection Certificate (NOC) in respect of In-service candidate. |

**4. (a) <u>Qualification</u>:**

Must have passed LL.B from recognized University.

**(b) <u>Age Limit:</u>**

A candidate applying to the said post shall not be less than 18 years of age and must not have completed the maximum age limit fixed in the second column in the table below, as on 20.07.2026.

| Candidates belonging to | Maximum Age Limit |
|---|---|
| General Merit | 40 years |
| Category - II(A)/ II(B)/ III(A)/ III(B) of Other Backward Classes | 43 years |
| Scheduled Caste/ Scheduled Tribe/ Category–I of Other Backward Classes | 45 years |
| Additional age relaxation will be provided to **othercategories**as per the Karnataka Civil Services (General Recruitment) Rules, 1977 (as amended from time to time). | |

## 5. Application fee:

The candidate shall pay the application fee through UPI/Net Banking/Debit Card payment gateway as mentioned in the online application. The fee prescribed for the candidate/s is as under:

| Candidates belonging to | Application Fee |
|---|---|
| General Merit/ Category - II(A)/ II(B)/ III(A)/ III(B) of Other Backward Classes | Rs.1,000/- |
| Scheduled Caste/ Scheduled Tribe/ Category–I of Other Backward Classes/ Persons with Benchmark Disability. | Rs.500/- |

**Note:**

1. ***The applications already filed, pursuant to earlier Notification, shall be treated as the applications under the present Notification subject to qualification prescribed. Such applicant need not file fresh application. In case any person is found to be age barred, such application will be rejected and the application fee paid will be refunded.***
2. Fee once paid will not be refunded under any circumstances even in case, fee has been paid for more than one application.
3. To avoid last minute rush, the candidate is advised to submit the application through online well in advance.
4. The candidate can submit application and make payment of application fee, round the clock, till 11:59 p.m., on 19.08.2026.
5. The application which does not fulfill the prescribed requirement shall be rejected.
6. The candidate called for Interview will be informed only through e-mail/SMS/WhatsApp as registered in the application.

## 6. Probation:

A candidate selected and appointed would be on probation for a period of two years, or for such extended period.

## 7. Mode of Selection:

Through Competitive Examination and Interview.The details of which are hereunder:

### (i) Competitive Examination Procedure:

1) The examination will be conducted through offline by way of objective type (OMR type) for Paper-I and Paper-II.
2) The examination will be conducted only at Bengaluru Centre.

3) The candidate shall download the admission card for the examination from the **Karnataka Examinations Authority Website** i.e., **https://cetonline.karnataka.gov.in/kea/indexnew** The candidate shall possess the downloaded admission card and the original Identity Proof (Driving License/Aadhaar Card/Pan Card/Passport/Voter ID) while appearing for the examination. Without admission card and identity proof referred to above, the candidate will not be permitted to appear for the examination.

4) The selected candidate who has not passed Kannada as the First or Second Language in the SSLC Examination conducted by the Karnataka Secondary Education Examination Board or any other examination declared equivalent to it by the State Government or in examinations higher than SSLC or has passed Kannada Language Examination (Compulsory Kannada Examination) conducted by the Commission or any other selection Authority, such candidate shall pass Kannada Language Departmental Examination conducted by Karnataka Public Service Commission and submit the passing certificate to the office of Karnataka State Legal Services Authority, Bengaluru, before completing the period of probation.

## (ii) Question Papers and Syllabus :

| Paper | Subject | Total Questions | Duration (Hours) | Maximum Marks | Minimum Marks |
|---|---|---|---|---|---|
| Paper-I | General knowledge:<br>• Current Affairs<br>• General Science<br>• History and Geography of Karnataka<br>• Social Science<br>• General Intellectual Ability<br>• Public Administration and Rural Development<br>• Environmental Science and Logical Thinking | 100 | 2 Hours | 300 | 105 |
| Paper-II | • The Legal Services Authorities Act, 1987<br>• The Karnataka State Legal Services Authority Rules, 1996.<br>• The Karnataka State Legal Services Authority Regulations, 1997<br>• The Karnataka Civil Services Rules, as amended from time to time.<br>• The Karnataka Financial Code, 1958<br>• Constitution of India<br>• Code of Civil Procedure, 1908 | 100 | 2 Hours | 300 | 105 |

| | | | | | |
|---|---|---|---|---|---|
| | • Bharatiya Nagarika Suraksha Sanhita, 2023<br>• Bharatiya Nyaya Sanhita, 2023<br>• Bharatiya Sakshya Adhiniyam, 2023<br>• General Knowledge in Kannada Language | | | | |

### (iii) Negative Valuation:

a. In Question Paper–I & Question Paper–II of the Competitive Examination, each question has four alternative answers, and the candidate has to select only one answer. 1/4th (0.75) marks will be deducted for each wrong answer.

b. In the OMR Sheet, there will be a fifth option/circle for each question. For the unanswered questions, the candidate shall shade the fifth option/circle. If any of the option/circle is not shaded, then 1/4th (0.75) marks for such question will be deducted.

c. An additional 05 minutes will be given after the last bell to shade fifth option, to avoid negative valuation.

### (iv) Interview:

The successful candidate in the Competitive Examination will be called for Interview in the ratio of 1:5 in each of the reserved category. The marks for the interview is as under:

| Particulars | Maximum Marks | Minimum marks |
|---|---|---|
| Interview (Viva-Voce) | 25 | 13 |

## PART-B

### I. General Instructions:

The candidate shall read all the instructions before submitting the online application.

While submitting application through online, the candidate shall ensure that he / she fulfills the eligibility criteria and other norms and that all the particulars furnished by the candidate are correct in all aspects and shall possess all the relevant marks cards and documents relating to Educational qualification / reservations.

### II.Eligibility Criteria:

i. The candidate must be an Indian citizen.

ii. A male candidate having more than one living wife and a female candidate already married to a person who has another wife shall not be eligible for appointment without obtaining the prior approval from the Government.

iii. The candidate, who is not claiming any relaxation under benchmark disability, should be mentally and physically fit and free from any physical defect likely to interfere with efficient performance of the duties. If the Medical Board is of the opinion that the candidate is not physically and mentally fit, the Karnataka State Legal Services Authority shall have the power to cancel the appointment of such candidate.

iv. A person who has been permanently debarred from examination or recruitment conducted by the Central or the State of Karnataka or other State Public Service Commission or Karnataka Examinations Authority or any University, will not be eligible for appointment.

v. A person who has been convicted for an offence involving moral turpitude or who has been temporarily debarred or disqualified from examinations or requirements conducted by the Central or Karnataka State or any other State Public Service Commission or Karnataka Examinations Authority or any University shall not be eligible for appointment until the Government/ Competent Authority holds him/ her eligible for appointment.

vi. There shall be no pending criminal case/s against the candidate.

## III. Telephone Number for any clarification:

Karnataka Examinations Authority Helpline No.080-23460460
(09.00 AM to 07.00 PM - on working days).

## IV. Procedure for submitting onlineapplication:

a. The candidate shall submit the online application through https://cetonline.karnataka.gov.in/kea/indexnew **(Applications sent by any mode other than online, will be rejected).**

b. The candidate shall fill all the particulars sought in the application and payment of fee shall be made in accordance with the instructions. Application once submitted cannot be modified.

c. The candidate shall provide the Postal Address, Mobile number and valid e-mail ID mandatorily at relevant columns for the purpose of communication, while submitting online application. The Karnataka Examinations Authority is not responsible for non-receipt of SMS/e-mail/WhatsApp due to furnishing of incorrect information i.e., invalid Mobile Number and e-mail.

d. The candidate shall scan the latest passport size photograph with white background (having 5 cm length X 3.5 cm breadth with maximum size 50kb to 200kb) and signature on white paper in

black ball point pen (having 2.5 cm length X 7.5 cm breadth with maximum size 25kb to 50kb) in jpg format and upload the same, while submitting the online application. The jpg format must be clear and visible, else the application will be rejected.

e. The candidate shall compulsorily provide the following details in the online application;

   i) Aadhaar Card Number
   ii) SSLC/10th Standard Registration Number
   iii) LL.B Marks Card
   iv) Caste Certificate and Income details, if applicable.
   v) Other Reservations i.e., Rural from 1 to 10th standard and Persons with Benchmark Disability.

f. Before final submission of the online application, the candidate will be able to preview the duly filled application. Candidate is advised to take printout of the filled application for his / her record.

g. The candidate should retain the application number for generation of admission card and intimation letter from the link provided on the Website of Karnataka Examinations Authority and for any other information regarding his / her eligibility for Interview.

h. (i) Candidate is advised to visit website of Karnataka Examinations Authority for updates regarding the recruitment to the post of Section Officer at regular intervals.The date of examination shall not be sent individually, the same will be notified in the website.

   (ii) The list of eligible candidates for Interview will be published on the following websites of Karnataka Examinations Authority and Karnataka State Legal Services Authority i.e.,

      a) https://cetonline.karnataka.gov.in/kea/indexnew
      and
      b) https://karnataka.nalsa.gov.in

   (iii) Intimation for interview will be sent to the eligible candidates through SMS/e-mail/WhatsApp furnished by the candidate at the time of submission of online application.

i. In case, the candidate submits more than one online application, the last of the application submitted will be entertained. All previous application/s stand/s rejected and no correspondence will be entertained.

j. The candidates appearing for the Competitive Examination and Interview shall bear their own cost.

## V. Candidates claiming reservations shall possess:

| | | |
|---|---|---|
| Caste Reservation | (1) | The certificate in prescribed format as on the date of submission of application. |
| | (2) | Prescribed format of Caste Certificate:<br>Scheduled Caste / Scheduled Tribe — Form –D<br>Category – I — Form – E<br>Category-II (A) / II (B) / III (A)/ III (B) — Form – F |

## VI. Candidates claiming other reservations shall possess:

| | | |
|---|---|---|
| Rural Reservation | (1) | Candidate should have studied from class 1 to 10 standard in rural area. |
| | (2) | Candidate belonging to General Merit and claiming the Rural Reservation shall submit a certificate in Form 2 duly countersigned by the Block Education Officer (BEO) and a certificate in Form No.1 stating that the candidate does not belong to Creamy Layer, issued by the concerned Tahsildar. |
| | (3) | Candidate belonging to Scheduled Caste / Scheduled Tribe/Category-I, Category-II(A), II (B), III (A), III (B) claiming under the Rural Reservation should mandatorily submit a certificate in Form-2 duly countersigned by Block Education Officer (BEO). If any candidate fails to submit the same, such candidate will be ineligible to claim Rural Reservation. |
| Reservation under Ex-Servicemen | | Candidate shall possess the certificate of Release or Discharge from Armed Forces. |
| Reservation under Persons with Benchmark Disability | | Candidate shall possess the certificate issued by the concerned Authority, as prescribed in the Official Memorandum No. DPAR 115 SRR 2005 dated 19.11.2005. |
| Reservation under Transgender | | Candidate shall possess certificate issued by the Competent Authority as per Section 6 of the Transgender Persons (Protection of Rights) Act, 2019. |
| In-service candidate | | Candidate is required to submit No Objection Certificate (NOC) to the office of Karnataka State Legal Services Authority immediately after the issuance |

| | |
|---|---|
| | of selection list but the same should be submitted before the issuance of an appointment order. |
| The caste and other reservation certificates which are obtained after the last date of online application will not be considered. | |

(i) The original documents in respect of educational qualification, caste and other reservations as claimed by the candidate shall be produced at the time of Interview/Verification. If any candidate, fails to produce the same at the time of Interview/Verification, it will result in cancellation of reservation of such candidate and his/her application will be considered only under General Merit category, if he/she otherwise eligible.

(ii) Reservation Certificates submitted in formats other than prescribed will not be considered.

**VII.** Candidate called for Interview shall produce a copy of Intimation Letter along with original Proof of Identity i.e., Voter ID/Aadhaar Card/PAN Card/ Ration Card/Passport/Driving Licence and the documents supporting claim for reservation as mentioned at Part-B - IV(e).

**VIII. Character Certificates:**

a) One certificate issued from the Head of the Institution in which the candidate has completed LL.B with study details, and

b) Two certificates from respectable persons in the society and not being relative but who is well acquainted with the candidate.

**IX.** If any discrepancies are found in the online application and original documents submitted during verification, the candidature will be rejected.

**X.** Merely attending the Competitive Examination / Interview shall not confer any right of appointment and no candidate shall be appointed to the post unless the Karnataka State Legal Services Authority is satisfied, after such enquiries as may be considered necessary that the candidate is suitable in all respects for appointment to the post.

**XI**. The candidate appointed to the post of Section Officer will be posted in the office of the Karnataka State Legal Services Authority or any of the District Legal Services Authorities in the State.

**XII**. If any candidate attempts to influence the selection process, will not be eligible for selection.

**XIII.** In the event of any inconsistency between Kannada and English version of this notification, the English version shall prevail.

**XIV.** On verification, at any stage of recruitment or after appointment, if it is found that the information furnished by the candidate in the application is false or the candidate does not fulfill any of the eligibility criteria and / or that he / she has suppressed / twisted / truncated any material facts, candidature/selection/ appointment stands cancelled.

**XV.** The candidate furnishing false or incorrect information would not only incur disqualification but also liable for criminal prosecution.

BY ORDER OF HON'BLE EXECUTIVE CHAIRPERSON,
KARNATAKA STATE LEGAL SERVICES AUTHORITY

Sd/-
**(H. SHASHIDHARA SHETTY)**
MEMBER SECRETARY,
KARNATAKA STATE LEGAL SERVICES AUTHORITY,
BENGALURU

# ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು.

## ಅಧಿಸೂಚನೆ

**ಸಂಖ್ಯೆ:ಕರಾಕಾಸೇಪ್ರಾ:03/ಎಡಿಎಮ್/ಎಸ್‌ಒ/2026 ದಿನಾಂಕ: 20.07.2026**

ಶಾಖಾಧಿಕಾರಿ ಹುದ್ದೆಗಳಿಗಾಗಿ
ಅಭ್ಯರ್ಥಿಗಳ ನೇರ ನೇಮಕಾತಿ

## ಉಳಿದ ಮೂಲ ವೃಂದದಲ್ಲಿ

**ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:19.08.2026**

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು, ಇಲ್ಲಿ **18 ಶಾಖಾಧಿಕಾರಿ ಹುದ್ದೆಗಳಿಗೆ** ಉಳಿದ ಮೂಲ ವೃಂದದ ಅಡಿಯಲ್ಲಿ ನೇರ ನೇಮಕಾತಿಗಾಗಿ ಅರ್ಜಿಯನ್ನು ಸಲ್ಲಿಸಲು ಈ ಕೆಳಕಂಡಂತೆ ನಿಗದಿಪಡಿಸಿರುವ ಅಗತ್ಯ ಮತ್ತು ಇತರೆ ಅರ್ಹತಾ ಷರತ್ತುಗಳನ್ನು ಪೂರೈಸುವ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯನ್ನು ಸಲ್ಲಿಸಬಹುದೆಂದು ಅಧಿಸೂಚಿಸಲಾಗಿದೆ.

**ಈ ಅಧಿಸೂಚನೆಯು ಅಥವಾ ನೇಮಕಾತಿಯು ರಿಟ್ ಅರ್ಜಿ ಸಂಖ್ಯೆ 200448/2025 c/w 17968/2025 ಮತ್ತು 3145/2023 ಪ್ರಕಾರ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.**

## ಭಾಗ – ಎ

1. **ಖಾಲಿ ಹುದ್ದೆಗಳ ವರ್ಗೀಕರಣ:**

**ಉಳಿದ ಮೂಲವೃಂದದ 18 ಹುದ್ದೆಗಳು**

| ಪ್ರವರ್ಗ | | ಮೀಸಲು ರಹಿತ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಕನ್ನಡ ಮಾಧ್ಯಮ ಅಭ್ಯರ್ಥಿ | ವಿಶೇಷ ವಿಕಲಚೇತನ ಅಭ್ಯರ್ಥಿ | ಮಾಜಿ ಸೈನಿಕ | ತೃತೀಯ ಲಿಂಗ | ಒಟ್ಟು | |
|---|---|---|---|---|---|---|---|---|---|---|
| ಸಾಮಾನ್ಯ ಅಭ್ಯರ್ಥಿ | | 02 | 03 | 03 | – | 01* | – | – | **09** | |
| ಪರಿಶಿಷ್ಟ ಜಾತಿ (ಪ್ರವರ್ಗ–ಎ) | | 01 | – | – | – | – | – | – | **01** | **03** |
| ಪರಿಶಿಷ್ಟ ಜಾತಿ (ಪ್ರವರ್ಗ–ಬಿ) | | 01 | – | – | – | – | – | – | **01** | |
| ಪರಿಶಿಷ್ಟ ಜಾತಿ (ಪ್ರವರ್ಗ–ಸಿ) | ಇತರೆ | – | – | – | – | – | – | – | **01** | |
| | ಅ.ಹಿಂ** | 01 | – | – | – | – | – | – | | |
| ಪರಿಶಿಷ್ಠ ಪಂಗಡ | | 01 | – | – | – | – | – | – | **01** | |
| ಪ್ರವರ್ಗ– 1 | | 01 | – | – | – | – | – | – | **01** | |
| ಪ್ರವರ್ಗ– 2(ಎ) | | 01 | 01 | – | – | – | – | – | **02** | |
| ಪ್ರವರ್ಗ– 2(ಬಿ) | | 01 | – | – | – | – | – | – | **01** | |
| ಪ್ರವರ್ಗ – 3(ಎ) | | 01 | – | – | – | – | – | – | **01** | |
| ಪ್ರವರ್ಗ – 3(ಬಿ) | | – | – | – | – | – | – | – | – | |
| **ಒಟ್ಟು** | | **10** | **04** | **03** | – | **01*** | – | – | **18** | |

**ಟಿಪ್ಪಣಿ:**

1. ಮೇಲಿನ ವರ್ಗೀಕರಣವನ್ನು ಸರ್ಕಾರದ ಆದೇಶ ಸಂಖ್ಯೆ :ಸಿಆಸುಇ 02 ಸೆಹಿಮ 2026, ದಿನಾಂಕ 13.05.2026 ಮತ್ತು ಸರ್ಕಾರದ ಆದೇಶ ಸಂಖ್ಯೆ:ಸಕಇ 8 ಎಸ್‌ಎಲ್‌ಪಿ 2024 (ಭಾಗ–1), ದಿನಾಂಕ:22.05.2026ರ ಪ್ರಕಾರ ಮಾಡಲಾಗಿದೆ.
2. (*) ಚಿಹ್ನೆಯು ಹುದ್ದೆಗಳ ವರ್ಗೀಕರಣವನ್ನು ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 149 ಎಸ್‌ಆರ್‌ಆರ್ 2020, ದಿನಾಂಕ 25.09.2020 ಯ ಪ್ರಕಾರ ನಿರ್ದಿಷ್ಟ ಅಂಗವೈಕಲ್ಯತೆಯುಳ್ಳ (Persons with Benchmark Disability) ವ್ಯಕ್ತಿಗಳಿಗೆ, ಈ ಕೆಳಗಿನಂತೆ ಮೀಸಲಾತಿಯನ್ನು ಗುರುತಿಸಲಾಗಿದೆ :
3. (**) ಚಿಹ್ನೆಯು ಅತ್ಯಂತ ಹಿಂದುಳಿದ ವರ್ಗಕ್ಕೆಂದು ಸೂಚಿಸುತ್ತದೆ.

| ಪ್ರವರ್ಗ | ಸಮತಲಮೀಸಲಾತಿ | ಗುರುತಿಸಲಾದ ಅಂಗವಿಕಲತೆ |
|---|---|---|
| ಸಾಮಾನ್ಯ ಅಭ್ಯರ್ಥಿ | 4ನೇ ಬಿಂದು | Blindness and low vision |

## 2. ವೇತನ ಶ್ರೇಣಿ:

69250–1650-74200-1900-85600-2300-99400-2700-115600-3100-134200

## 3. ನೇಮಕಾತಿಯ ವಿಧಾನ:

ಅಭ್ಯರ್ಥಿಗಳ ಆಯ್ಕೆಯನ್ನು ಈ ಕೆಳಗಿನ ನಿಯಮಗಳ ಅನುಸಾರ ಮಾಡಲಾಗುತ್ತದೆ ;

ಎ) ಕಾನೂನು ಸೇವೆಗಳ ಪ್ರಾಧಿಕಾರಗಳ ಕಾಯಿದೆ, 1987.

ಬಿ) ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿಯಮಗಳು, 1996.

ಸಿ) ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿಬಂಧನೆಗಳು, 1997.

ಡಿ) ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 (ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದಂತೆ).

ಇ) ಕರ್ನಾಟಕ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳು (ನೇಮಕಾತಿ ಮೀಸಲಾತಿ ಇತ್ಯಾದಿ) ಕಾಯಿದೆ, 1990.

ಎಫ್) ಕರ್ನಾಟಕ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳು (ನೇಮಕಾತಿ ಮೀಸಲಾತಿ ಇತ್ಯಾದಿ) ನಿಯಮಗಳು, 1992.

ಜಿ) ಈ ಕೆಳಗಿನ ಸರ್ಕಾರದ ಸುತ್ತೋಲೆಗಳು / ಅಧಿಸೂಚನೆಗಳ ಪ್ರಕಾರ :

| ಕ್ರಮ ಸಂಖ್ಯೆ | ಸರ್ಕಾರದ ಸುತ್ತೋಲೆಗಳು / ಅಧಿಸೂಚನೆಗಳು | ದಿನಾಂಕ | ವಿಷಯ |
|---|---|---|---|
| 1. | ಸಿಆಸುಇ 262 ಸೇನೆನಿ 2025 | 29.01.2026 | ವಯೋಮಿತಿಯಲ್ಲಿ 5 ವರ್ಷಗಳ ಸಡಿಲಿಕೆಯನ್ನು ನೀಡುವ ಬಗ್ಗೆ (ಒಂದು ಬಾರಿಯ ಕ್ರಮವಾಗಿ) |
| 2. | ಸಿಆಸುಇ 08 ಸೇನೆನಿ 2001 | 13.02.2001 | ಅಭ್ಯರ್ಥಿಯು ಗ್ರಾಮೀಣ ಮೀಸಲಾತಿ ಸೌಲಭ್ಯ ಕೋರುವ ಬಗ್ಗೆ. |
| 3. | ಸಿಆಸುಇ 19 ಸೇನೆನಿ 2020 | 12.10.2020 | ಸೇವಾನಿರತ ಅಭ್ಯರ್ಥಿಯ ನಿರಾಪೇಕ್ಷಣಾ ಪ್ರಮಾಣಪತ್ರದ ಬಗ್ಗೆ. |

**4. (ಎ) ವಿದ್ಯಾರ್ಹತೆ :**

ಅಭ್ಯರ್ಥಿಯು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಕಾನೂನು ಪದವಿ (ಎಲ್ಎಲ್.ಬಿ) ಪಡೆದಿರಬೇಕು.

**(ಬಿ) ವಯೋಮಿತಿ:**

ಶಾಖಾಧಿಕಾರಿ ಹುದ್ದೆಗೆ ಅರ್ಜಿ ಸಲ್ಲಿಸುವ ಎಲ್ಲಾ ಪ್ರವರ್ಗದ ಅಭ್ಯರ್ಥಿಗಳು (ದಿನಾಂಕ 20.07.2026 ರಂತೆ), ಕನಿಷ್ಠ 18 ವರ್ಷಗಳಿಗಿಂತ ಕಡಿಮೆಯಿಲ್ಲದ ಮತ್ತು ಈ ಕೆಳಕಂಡಂತೆ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು:

| ಅಭ್ಯರ್ಥಿಯು ಸೇರಿದ ವರ್ಗ | ಗರಿಷ್ಠ ವಯೋಮಿತಿ |
|---|---|
| ಸಾಮಾನ್ಯ ಅಭ್ಯರ್ಥಿ | 40 ವರ್ಷಗಳು |
| ಇತರೆ ಹಿಂದುಳಿದ ವರ್ಗಗಳ ಪ್ರವರ್ಗ – II(ಎ)/ II(ಬಿ)/ III(ಎ)/ III(ಬಿ) | 43 ವರ್ಷಗಳು |
| ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಇತರೆ ಹಿಂದುಳಿದ ವರ್ಗಕ್ಕೆ ಸೇರಿದ ಪ್ರವರ್ಗ–I | 45 ವರ್ಷಗಳು |
| ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 (ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದಂತೆ) ರ ಪ್ರಕಾರ ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ ವಯೋಮಿತಿಯಲ್ಲಿ ಹೆಚ್ಚುವರಿ ಸಡಿಲಿಕೆ ನೀಡಲಾಗುವುದು. | |

## 5. ಅರ್ಜಿ ಶುಲ್ಕ:

ಅಭ್ಯರ್ಥಿಯು ಆನ್‌ಲೈನ್ ಅರ್ಜಿಯಲ್ಲಿ ಉಲ್ಲೇಖಿಸಿರುವಂತೆ ಯು.ಪಿ.ಐ./ ನೆಟ್ ಬ್ಯಾಂಕಿಂಗ್/ ಡೆಬಿಟ್ ಕಾರ್ಡ್ ಪಾವತಿ ಗೇಟ್‌ವೇ ಮೂಲಕ ಅರ್ಜಿ ಶುಲ್ಕವನ್ನು ಪಾವತಿಸಬೇಕು. ಅಭ್ಯರ್ಥಿಗಳಿಗೆ ನಿಗದಿಪಡಿಸಿದ ಶುಲ್ಕ ಈ ಕೆಳಗಿನಂತಿರುತ್ತದೆ:

| ಅಭ್ಯರ್ಥಿಯು ಸೇರಿದ ವರ್ಗ | ಅರ್ಜಿ ಶುಲ್ಕ |
|---|---|
| ಸಾಮಾನ್ಯ ಅಭ್ಯರ್ಥಿ/ ಇತರೆ ಹಿಂದುಳಿದ ವರ್ಗಗಳ ಪ್ರವರ್ಗ – II(ಎ)/ II(ಬಿ)/ III(ಎ)/ III(ಬಿ) | ರೂ.1,000/- |
| ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಇತರೆ ಹಿಂದುಳಿದ ವರ್ಗಕ್ಕೆ ಸೇರಿದ ಪ್ರವರ್ಗ–I ಹಾಗೂ ನಿರ್ದಿಷ್ಟ ಅಂಗವೈಕಲ್ಯವುಳ್ಳ(Persons with Benchmark Disability) ಅಭ್ಯರ್ಥಿಗಳಿಗೆ | ರೂ.500/- |

**ಸೂಚನೆಗಳು:**

1. ***<u>ಈ ಹಿಂದೆ ಹೊರಡಿಸಲಾದ ಅಧಿಸೂಚನೆಯ ಅನ್ವಯ ಈಗಾಗಲೇ ಸಲ್ಲಿಸಲಾದ ಅರ್ಜಿಗಳನ್ನು, ನಿಗದಿಪಡಿಸಲಾದ ಅರ್ಹತೆಗಳಿಗೆ ಒಳಪಟ್ಟು ಈ ಪ್ರಸ್ತುತ ಅಧಿಸೂಚನೆಯಡಿ ಸಲ್ಲಿಸಲಾದ ಅರ್ಜಿಗಳೆಂದು ಪರಿಗಣಿಸಲಾಗುವುದು. ಅಂತಹ ಅರ್ಜಿದಾರರು ಹೊಸದಾಗಿ ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ. ಯಾವುದೇ ಅರ್ಜಿದಾರರು ನಿಗದಿತ ವಯೋಮಿತಿಯನ್ನು ಮೀರಿರುವುದು ಕಂಡುಬಂದಲ್ಲಿ, ಅವರ ಅರ್ಜಿಯನ್ನು ತಿರಸ್ಕರಿಸಲಾಗುವುದು ಹಾಗೂ ಅವರು ಪಾವತಿಸಿದ ಅರ್ಜಿ ಶುಲ್ಕವನ್ನು ಮರುಪಾವತಿಸಲಾಗುವುದು.</u>***
2. ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಅರ್ಜಿಗಳಿಗೆ ಶುಲ್ಕವನ್ನು ಪಾವತಿಸಿದ್ದರೂ ಸಹ, ಒಮ್ಮೆ ಪಾವತಿಸಿದ ಶುಲ್ಕವನ್ನು ಯಾವುದೇ ಸಂದರ್ಭದಲ್ಲೂ ಮರುಪಾವತಿಸಲಾಗುವುದಿಲ್ಲ.
3. ಕೊನೆಯ ಕ್ಷಣದಲ್ಲಿ ಅರ್ಜಿ ಸಲ್ಲಿಸುವಾಗ ಆಗಬಹುದಾದ ಒತ್ತಡಗಳನ್ನು ತಪ್ಪಿಸಲು ಅಭ್ಯರ್ಥಿಯು ಮುಂಚಿತವಾಗಿಯೇ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವುದು.
4. ಅಭ್ಯರ್ಥಿಯು ದಿನಾಂಕ 19.08.2026ರ ರಾತ್ರಿ 11.59 ಘಂಟೆಯ ಒಳಗೆ ಶುಲ್ಕವನ್ನು ಪಾವತಿಸಿ, ಅರ್ಜಿಯನ್ನು ಸಲ್ಲಿಸಬೇಕು.
5. ನಿಗದಿತ ಅವಶ್ಯಕತೆಗಳನ್ನು ಪೂರೈಸದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
6. ಸಂದರ್ಶನಕ್ಕೆ ಕರೆಯಲ್ಪಡುವ ಅಭ್ಯರ್ಥಿಗಳಿಗೆ ಅರ್ಜಿಯಲ್ಲಿ ನೋಂದಾಯಿಸಿರುವ ಇ–ಮೇಲ್/ ಎಸ್.ಎಂ.ಎಸ್./ವಾಟ್ಸ್‌ಆಪ್ ಮೂಲಕ ಮಾತ್ರ ತಿಳಿಸಲಾಗುವುದು.

## 6. ಸೇವಾ ಪರಿವೀಕ್ಷಣಾ ಅವಧಿ:

ನೇಮಕಗೊಂಡ ಅಭ್ಯರ್ಥಿಯು ಎರಡು ವರ್ಷಗಳ ಅವಧಿಗೆ ಅಥವಾ ಅಗತ್ಯವಿದ್ದರೆ ವಿಸ್ತರಿಸಬಹುದಾದ ಅವಧಿಗೆ ಪರಿವೀಕ್ಷಣಾರ್ಥಿಗಳಾಗಿರುತ್ತಾರೆ.

## 7. ಆಯ್ಕೆ ವಿಧಾನ:

ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಸಂದರ್ಶನದ ವಿವರಗಳು ಈ ಕೆಳಕಂಡಂತಿವೆ:

## (i) ಸ್ಪರ್ಧಾತ್ಮಕ ಪರೀಕ್ಷಾ ವಿಧಾನ:

1) ಸ್ಪರ್ಧಾತ್ಮಕ ಪರೀಕ್ಷೆಯನ್ನು **ಆಫ್‌ಲೈನ್ ಮೂಲಕ** ವಸ್ತುನಿಷ್ಠ ಪ್ರಶ್ನೆಗಳನ್ನೊಳಗೊಂಡ ಪ್ರಶ್ನೆ ಪತ್ರಿಕೆ–1 ಮತ್ತು ಪ್ರಶ್ನೆ ಪತ್ರಿಕೆ–2ರ **ಒಎಂಆರ್ ಮಾದರಿ** (**Offline-OMR Type**) ಯಲ್ಲಿ ನಡೆಸಲಾಗುವುದು.

2) ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬೆಂಗಳೂರು ಕೇಂದ್ರದಲ್ಲಿ ನಡೆಸಲಾಗುವುದು.

3) ಅಭ್ಯರ್ಥಿಗಳು ಪರೀಕ್ಷೆಯ ಪ್ರವೇಶ ಪತ್ರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್: https://cetonline.karnataka.gov.in/kea/indexnew ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು. ಅಭ್ಯರ್ಥಿಯು ಕಡ್ಡಾಯವಾಗಿ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡು ಮೂಲ ಗುರುತಿನ ಚೀಟಿ (ವಾಹನ ಚಾಲನಾ ಪರವಾನಗಿ/ ಆಧಾರ್ ಕಾರ್ಡ್/ ಪ್ಯಾನ್‌ಕಾರ್ಡ್/ ಪಾಸ್‌ಪೋರ್ಟ್/ ವೋಟರ್ ಐಡಿ) ಯೊಂದಿಗೆ ಪರೀಕ್ಷಾ ಕೇಂದ್ರಕ್ಕೆ ಹೋಗಬೇಕು. ತಪ್ಪಿದ್ದಲ್ಲಿ ಪರೀಕ್ಷಾ ಕೇಂದ್ರವನ್ನು ಪ್ರವೇಶಿಸಲು ಅನುಮತಿಸಲಾಗುವುದಿಲ್ಲ.

4) ಅಭ್ಯರ್ಥಿಯು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅಥವಾ ರಾಜ್ಯ ಸರ್ಕಾರವು ಅದಕ್ಕೆ ತತ್ಸಮಾನವೆಂದು ಘೋಷಿಸಿದ ಯಾವುದೇ ಪರೀಕ್ಷೆಯಲ್ಲಿ ಅಥವಾ ಎಸ್.ಎಸ್.ಎಲ್.ಸಿ ಗಿಂತ ಉನ್ನತ ಮಟ್ಟದ ಪರೀಕ್ಷೆಗಳಲ್ಲಿ ಕನ್ನಡ ವಿಷಯವನ್ನು ಪ್ರಥಮ/ದ್ವಿತೀಯ ಭಾಷೆಯಾಗಿ ಅಭ್ಯಸಿಸಿದ್ದರೆ ಅಥವಾ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿ ಇಂತಹ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದರೆ ಅಥವಾ ಆಯೋಗ ಅಥವಾ ಇನ್ನಿತರ ಯಾವುದೇ ಆಯ್ಕೆ ಪ್ರಾಧಿಕಾರವು ಈ ಹಿಂದೆ ನಡೆಸಿದ ಕನ್ನಡ ಭಾಷೆಯ ಪರೀಕ್ಷೆ (ಕಡ್ಡಾಯ ಕನ್ನಡ ಪರೀಕ್ಷೆ)ಯಲ್ಲಿ ಉತ್ತೀರ್ಣರಾಗಿದ್ದರೆ, ಅಂತಹ ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ನೀಡಲಾಗುತ್ತದೆ. ಇಲ್ಲವಾದಲ್ಲಿ, ಕರ್ನಾಟಕ ಲೋಕ ಸೇವಾ ಆಯೋಗವು ನಡೆಸುವ ಕನ್ನಡ ಭಾಷಾ ಇಲಾಖಾ ಪರೀಕ್ಷೆಗೆ ಹಾಜರಾಗಿ, ಉತ್ತೀರ್ಣರಾದ ಬಗ್ಗೆ ಪ್ರಮಾಣ ಪತ್ರವನ್ನು ಪರಿವೀಕ್ಷಣಾ ಅವಧಿ ಮುಗಿಯುವುದರೊಳಗೆ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಛೇರಿಗೆ ಸಲ್ಲಿಸತಕ್ಕದ್ದು.

## (ii) ಪ್ರಶ್ನೆ ಪತ್ರಿಕೆ ಹಾಗೂ ಪಠ್ಯಕ್ರಮ:

| ಪ್ರಶ್ನೆ ಪತ್ರಿಕೆ | ವಿಷಯ | ಒಟ್ಟು ಪ್ರಶ್ನೆಗಳು | ಅವಧಿ | ಗರಿಷ್ಠ ಅಂಕಗಳು | ಕನಿಷ್ಠ ಅಂಕಗಳು |
|---|---|---|---|---|---|
| ಪತ್ರಿಕೆ–I | **ಸಾಮಾನ್ಯ ಜ್ಞಾನ :**<br>• ಪ್ರಚಲಿತ ವಿದ್ಯಾಮಾನಗಳು<br>• ಸಾಮಾನ್ಯ ವಿಜ್ಞಾನ<br>• ಕರ್ನಾಟಕದ ಇತಿಹಾಸ ಮತ್ತು ಭೂಗೋಳಶಾಸ್ತ್ರ<br>• ಸಮಾಜ ವಿಜ್ಞಾನ<br>• ಸಾಮಾನ್ಯ ಬೌದ್ಧಿಕ ಸಾಮರ್ಥ್ಯ<br>• ಸಾರ್ವಜನಿಕ ಆಡಳಿತ ಮತ್ತು ಗ್ರಾಮೀಣಾಭಿವೃದ್ಧಿ<br>• ಪರಿಸರ ವಿಜ್ಞಾನ ಮತ್ತು ತಾರ್ಕಿಕ ಚಿಂತನೆ | 100 | 2 ಘಂಟೆ | 300 | 105 |

| | | | | | |
|---|---|---|---|---|---|
| ಪತ್ರಿಕೆ– II | • ಕಾನೂನು ಸೇವೆಗಳ ಪ್ರಾಧಿಕಾರಗಳ ಕಾಯಿದೆ, 1987<br>• ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿಯಮಗಳು, 1996<br>• ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿಬಂಧನೆಗಳು, 1997<br>• ಕರ್ನಾಟಕ ನಾಗರಿಕ ಸೇವಾ ನಿಯಮಗಳು(ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದಂತೆ)<br>• ಕರ್ನಾಟಕ ಆರ್ಥಿಕ ಸಂಹಿತೆ, 1958<br>• ಭಾರತದ ಸಂವಿಧಾನ<br>• ಸಿವಿಲ್ ಪ್ರಕ್ರಿಯಾ ಸಂಹಿತೆ, 1908<br>• ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ, 2023<br>• ಭಾರತೀಯ ನ್ಯಾಯ ಸಂಹಿತಾ, 2023<br>• ಭಾರತೀಯ ಸಾಕ್ಷ್ಯ ಅಧಿನಿಯಮ, 2023<br>• ಕನ್ನಡ ಸಾಮಾನ್ಯ ಭಾಷಾ ಜ್ಞಾನ | **100** | **2 ಘಂಟೆ** | **300** | **105** |

**(iii) ಋಣಾತ್ಮಕ ಮೌಲ್ಯಮಾಪನ (Negative Valuation):**

ಎ) ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆ ಪತ್ರಿಕೆ–1 ಮತ್ತು ಪ್ರಶ್ನೆ ಪತ್ರಿಕೆ – 2 ರಲ್ಲಿ, ಪ್ರತಿಪ್ರಶ್ನೆಗೆ ನಾಲ್ಕು ಪರ್ಯಾಯ ಉತ್ತರಗಳಿದ್ದು, ಅಭ್ಯರ್ಥಿಯು ಕೇವಲ ಒಂದು ಉತ್ತರವನ್ನು ಆಯ್ಕೆ ಮಾಡತಕ್ಕದ್ದು. ಪ್ರತಿಯೊಂದು ತಪ್ಪು ಉತ್ತರಕ್ಕೆ 1/4th (0.75)ರಷ್ಟು ಅಂಕವನ್ನು ಕಡಿತಗೊಳಿಸಲಾಗುವುದು.

ಬಿ) ಒ.ಎಂ.ಆರ್.ಉತ್ತರ ಪತ್ರಿಕೆಯಲ್ಲಿ ಪ್ರತಿಯೊಂದು ಪ್ರಶ್ನೆಗೆ 5ನೇ ಆಯ್ಕೆ/ವೃತ್ತವಿರುತ್ತದೆ. ಉತ್ತರಿಸದ ಪ್ರಶ್ನೆಗಳಿಗೆ ಅಭ್ಯರ್ಥಿಯು 5ನೇ ಆಯ್ಕೆ / ವೃತ್ತವನ್ನು ಗುರುತು ಮಾಡತಕ್ಕದ್ದು. ಒಂದು ವೇಳೆ ಯಾವುದೇ ಆಯ್ಕೆ/ವೃತ್ತವನ್ನು ಗುರುತು ಮಾಡದೇ ಇದ್ದಲ್ಲಿ ಸದರಿ ಪ್ರಶ್ನೆಗೆ 1/4th (0.75) ರಷ್ಟು ಅಂಕವನ್ನು ಕಡಿತಗೊಳಿಸಲಾಗುವುದು.

ಸಿ) ಋಣಾತ್ಮಕ ಮೌಲ್ಯಮಾಪನವನ್ನು ತಪ್ಪಿಸಲು 5ನೇ ಆಯ್ಕೆ/ವೃತ್ತವನ್ನು ಗುರುತಿಸಲು ಕೊನೆಯ ಬೆಲ್ ಆದ ನಂತರ ಹೆಚ್ಚುವರಿ 05 ನಿಮಿಷಗಳ ಕಾಲಾವಕಾಶವನ್ನು ನೀಡಲಾಗುವುದು.

**(iv) ಸಂದರ್ಶನ:**

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ವಿಯಾದ ಅಭ್ಯರ್ಥಿಗಳನ್ನು, ಪ್ರತಿ ಮೀಸಲಾತಿ ವಿಭಾಗದಲ್ಲಿ 1:5 ರ ಅನುಪಾತದಂತೆ ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನದ ಅಂಕಗಳು ಈ ಕೆಳಕಂಡಂತಿವೆ:

| ವಿವರ | ಗರಿಷ್ಠ ಅಂಕಗಳು | ಕನಿಷ್ಠ ಅಂಕಗಳು |
|---|---|---|
| ಸಂದರ್ಶನ (Viva-Voce) | 25 | 13 |

## ಭಾಗ – ಬಿ

## I. ಸಾಮಾನ್ಯ ಸೂಚನೆಗಳು

ಅಭ್ಯರ್ಥಿಯು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಮೊದಲು ಎಲ್ಲಾ ಸೂಚನೆಗಳನ್ನು ಓದಿಕೊಳ್ಳತಕ್ಕದ್ದು.

ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸುವಾಗ, ಅಭ್ಯರ್ಥಿಯು ಅರ್ಹತಾ ಮತ್ತು ಇತರೆ ಮಾನದಂಡಗಳನ್ನು ಪೂರೈಸಿದ್ದಾರೆಂದು ಹಾಗೂ ಒದಗಿಸಿದ ಎಲ್ಲಾ ವಿವರಗಳು ಸರಿಯಾಗಿವೆಯೆಂದು ಖಚಿತಪಡಿಸಿಕೊಳ್ಳಬೇಕು. ಆನ್‌ಲೈನ್‌ನಲ್ಲಿ ಮಾಹಿತಿಯನ್ನು ಒದಗಿಸುವಾಗ ಅಭ್ಯರ್ಥಿಯು ಸಂಬಂಧಪಟ್ಟ ಅಂಕಪಟ್ಟಿಗಳು ಮತ್ತು ಶೈಕ್ಷಣಿಕ ಅರ್ಹತೆ/ಮೀಸಲಾತಿಗಳಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಹೊಂದಿರಬೇಕು.

## II. ಅರ್ಹತಾ ಷರತ್ತುಗಳು:

i. ಅಭ್ಯರ್ಥಿಯು ಕಡ್ಡಾಯವಾಗಿ ಭಾರತೀಯ ನಾಗರಿಕನಾಗಿರಬೇಕು.

ii. ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ನೇಮಕಾತಿಗೆ ಅರ್ಹರಾಗುವುದಿಲ್ಲ.

iii. ಅಭ್ಯರ್ಥಿಯು ನಿದಿಷ್ಠ ಅಂಗವೈಕಲ್ಯತೆಯಡಿಯಲ್ಲಿ ವಿಯಾಯಿತಿ ಕೇಳದೇ ಇದ್ದಲ್ಲಿ ಆತನು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತನಾಗಿರಬೇಕು ಹಾಗೂ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸುವ ಯಾವುದೇ ದೈಹಿಕ ನ್ಯೂನ್ಯತೆ ಇರಬಾರದು. ಒಂದು ವೇಳೆ, ವೈದ್ಯಕೀಯ ಮಂಡಳಿ ಅಭ್ಯರ್ಥಿಯು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢತೆ ಇಲ್ಲ ಎಂದು ಅಭಿಪ್ರಾಯಪಟ್ಟಲ್ಲಿ ಅಂತಹ ಅಭ್ಯರ್ಥಿಯ ನೇಮಕಾತಿಯನ್ನು ರದ್ದುಗೊಳಿಸುವ ಅಧಿಕಾರ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಇರುತ್ತದೆ.

iv. ಕೇಂದ್ರ ಅಥವಾ ಕರ್ನಾಟಕ ರಾಜ್ಯ ಅಥವಾ ಇತರೆ ರಾಜ್ಯದ ಲೋಕಸೇವಾ ಆಯೋಗ ಅಥವಾ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ಯಾವುದೇ ವಿಶ್ವವಿದ್ಯಾಲಯಗಳಿಂದ ನಡೆಸಲಾಗುವ ಪರೀಕ್ಷೆಗಳಿಂದ ಅಥವಾ ನೇಮಕಾತಿಗಳಿಂದ ಖಾಯಂ ಆಗಿ ಡಿಬಾರ್ ಆದ ವ್ಯಕ್ತಿಗಳು ನೇಮಕಾತಿಗೆ ಅರ್ಹರಾಗುವುದಿಲ್ಲ.

v. ಯಾವುದೇ ನೈತಿಕ ಪರಿಭಾಷೆಯ ಶಿಕ್ಷೆಗೆ ಒಳಪಟ್ಟ ವ್ಯಕ್ತಿ ಅಥವಾ ಕೇಂದ್ರ ಅಥವಾ ಕರ್ನಾಟಕ ರಾಜ್ಯ ಅಥವಾ ಇತರೆ ರಾಜ್ಯದ ಲೋಕಸೇವಾ ಆಯೋಗ ಅಥವಾ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ಯಾವುದೇ ವಿಶ್ವವಿದ್ಯಾಲಯಗಳಿಂದ ನಡೆಸಲಾಗುವ ಪರೀಕ್ಷೆಗಳಿಂದ ಅಥವಾ ನೇಮಕಾತಿಗಳಿಂದ ತಾತ್ಕಾಲಿಕವಾಗಿ ಡಿಬಾರ್ ಆದ ಅಥವಾ ಅನರ್ಹಗೊಂಡ ವ್ಯಕ್ತಿಯು, ಸರ್ಕಾರವು ಎಲ್ಲಾ ಸಂದರ್ಭಗಳನ್ನು ಮರುಪರಿಶೀಲಿಸಿ ಅವರು ನೇಮಕಾತಿಗೆ ಅರ್ಹರೆಂದು ಪರಿಗಣಿಸುವವರೆಗೂ ನೇಮಕಾತಿಗೆ ಅರ್ಹರಾಗುವುದಿಲ್ಲ.

vi. ಅಭ್ಯರ್ಥಿಯ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣ ಇರಬಾರದು.

## III. ಸಂದೇಹ ನಿವಾರಣೆಗಾಗಿ ದೂರವಾಣಿ ಸಂಖ್ಯೆ :

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಸಹಾಯವಾಣಿ ಸಂಖ್ಯೆ :080–23460460
(ಬೆಳಗ್ಗೆ 09.00 ರಿಂದ ಸಂಜೆ 07.00 ಘಂಟೆವರೆಗೆ – ಕೆಲಸದ ದಿನಗಳಲ್ಲಿ ಮಾತ್ರ)

## IV. ಅನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸುವ ವಿಧಾನ :

ಎ) ಅಭ್ಯರ್ಥಿಯು ಆನ್‌ಲೈನ್ ಮೂಲಕ ಅರ್ಜಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ https://cetonline.karnataka.gov.in/kea/indexnew ವೆಬ್‌ಸೈಟ್‌ನಲ್ಲಿ ಸಲ್ಲಿಸತಕ್ಕದ್ದು. (**ಆನ್‌ಲೈನ್ ಹೊರತುಪಡಿಸಿ ಬೇರೆ ಯಾವುದೇ ವಿಧಾನದಿಂದ ಕಳುಹಿಸಲಾದ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ.**)

ಬಿ) ಅಭ್ಯರ್ಥಿಯು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಅಗತ್ಯವಿರುವ ಮಾಹಿತಿಯನ್ನು ಭರ್ತಿ ಮಾಡಿ, ಉಲ್ಲೇಖಿಸಲಾದ ಸೂಚನೆಗೆ ಅನುಗುಣವಾಗಿ ಶುಲ್ಕವನ್ನು ಪಾವತಿಸತಕ್ಕದ್ದು. ಒಮ್ಮೆ ಸಲ್ಲಿಸಿದ ಅರ್ಜಿಯ ತಿದ್ದುಪಡಿಗೆ ಅವಕಾಶವಿರುವುದಿಲ್ಲ.

ಸಿ) ಅಭ್ಯರ್ಥಿಯು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಸಂವಹನಕ್ಕಾಗಿ ಸಂಬಂಧಿತ ಕಾಲಂಗಳಲ್ಲಿ ಕಡ್ಡಾಯವಾಗಿ ಅವನ/ಅವಳ ಚಾಲ್ತಿಯಲ್ಲಿರುವ ಅಂಚೆ ವಿಳಾಸ, ಮೊಬೈಲ್ ಸಂಖ್ಯೆ ಮತ್ತು ಇ-ಮೇಲ್ ಐಡಿಯನ್ನು ಒದಗಿಸಬೇಕು.ತಪ್ಪಾದ ಮಾಹಿತಿಯನ್ನು ಒದಗಿಸಿದಲ್ಲಿ ಎಸ್‌ಎಂಎಸ್/ಇ-ಮೇಲ್/ವಾಟ್ಸ್‌ಆಪ್ ಮುಖಾಂತರ ಸೂಚನೆ/ಸಂದೇಶಗಳು ಅಭ್ಯರ್ಥಿಗೆ ತಲುಪದಿದ್ದಲ್ಲಿ,ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಜವಾಬ್ದಾರರಾಗಿರುವುದಿಲ್ಲ.

ಡಿ) ಅಭ್ಯರ್ಥಿಯು ತನ್ನ ಇತ್ತೀಚಿನ ಪಾಸ್‌ಪೋರ್ಟ್ ಗಾತ್ರದ ಶ್ವೇತ ವರ್ಣದ ಹಿನ್ನಲೆಯುಳ್ಳ ಛಾಯಾಚಿತ್ರವನ್ನು ಸ್ಕ್ಯಾನ್ ಮಾಡಬೇಕು (5 ಸೆ.ಮೀ. ಉದ್ದ X 3.5 ಸೆ.ಮೀ. ಅಗಲ ಮತ್ತು ಗರಿಷ್ಠ 50 ಕೆಬಿ ಯಿಂದ 200 ಕೆಬಿ ಗಾತ್ರ) ಮತ್ತು ಕಪ್ಪು ಬಾಲ್ ಪಾಯಿಂಟ್ ಪೆನ್‌ನಲ್ಲಿ ಬಿಳಿಕಾಗದದ ಮೇಲೆ ಸಹಿಯನ್ನು (2.5 ಸೆ.ಮೀ. ಉದ್ದ X 7.5 ಸೆ.ಮೀ. ಅಗಲ ಮತ್ತು ಗರಿಷ್ಠ 25 ಕೆಬಿ ಯಿಂದ 50 ಕೆ.ಬಿ. ಗಾತ್ರ) jpg ಸ್ವರೂಪದಲ್ಲಿ ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಅಪ್‌ಲೋಡ್ ಮಾಡತಕ್ಕದ್ದು. jpg ಚಿತ್ರಗಳು ಸ್ಪಷ್ಟವಾಗಿ ಕಾಣುವಂತಿರಬೇಕು, ಹಾಗೆ ಇಲ್ಲದಿದ್ದಲ್ಲಿ ಅಂತಹ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

ಇ) ಅಭ್ಯರ್ಥಿಯು ಈ ಕೆಳಗಿನ ಮಾಹಿತಿಯನ್ನು ಆನ್‌ಲೈನ್ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಕಡ್ಡಾಯವಾಗಿ ಒದಗಿಸಬೇಕು;

(i) ಆಧಾರ್ ಕಾರ್ಡ್ ಸಂಖ್ಯೆ
(ii) ಎಸ್.ಎಸ್.ಎಲ್.ಸಿ. ಅಂಕಪಟ್ಟಿಯ ನೋಂದಣಿ ಸಂಖ್ಯೆ
(iii) ಕಾನೂನು ಪದವಿ ಅಂಕಪಟ್ಟಿಯ ವಿವರ
(iv) ಜಾತಿ ಮತ್ತು ಆದಾಯ ಪ್ರಮಾಣಪತ್ರ, ಅನ್ವಯಿಸಿದರೆ ಮಾತ್ರ
(v) ಇತರೆ ಮೀಸಲಾತಿಗಳು i.e., ಗ್ರಾಮೀಣ ಅಭ್ಯರ್ಥಿಗಳು 1 ರಿಂದ 10ನೇ ತರಗತಿ ವ್ಯಾಸಂಗ ಮಾಡಿರುವ ಮತ್ತು ನಿರ್ದಿಷ್ಟ ಅಂಗವೈಕಲ್ಯವುಳ್ಳ (Persons with Benchmark Disability) ವ್ಯಕ್ತಿಗೆ ನೀಡುವ ಪ್ರಮಾಣ ಪತ್ರ

ಎಫ್) ಆನ್‌ಲೈನ್ ಅರ್ಜಿಯನ್ನು ಅಂತಿಮವಾಗಿ ಸಲ್ಲಿಸುವ ಮೊದಲು, ಅಭ್ಯರ್ಥಿಯು ಸರಿಯಾಗಿ ಭರ್ತಿ ಮಾಡಿದ ಅರ್ಜಿಯನ್ನು ಪೂರ್ವವೀಕ್ಷಣೆ (Preview) ಮಾಡಬಹುದು. ಅಭ್ಯರ್ಥಿಯು ಭರ್ತಿ ಮಾಡಿದ ಅರ್ಜಿಯನ್ನು ತನ್ನ ದಾಖಲೆಗಾಗಿ ಮುದ್ರಿಸಿಟ್ಟುಕೊಳ್ಳತಕ್ಕದ್ದು.

ಜಿ) ಅಭ್ಯರ್ಥಿಯು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಒದಗಿಸಲಾಗುವ ಲಿಂಕ್‌ನಿಂದ ಸೂಚನಾ / ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಲು ಮತ್ತು ಸ್ಪರ್ಧಾತ್ಮಕ ಪರೀಕ್ಷೆಗೆ / ಸಂದರ್ಶನಕ್ಕೆ ಅರ್ಹತೆಯ ಕುರಿತು ಮಾಹಿತಿಗಾಗಿ ತಮ್ಮ ಅರ್ಜಿ ಸಂಖ್ಯೆಯನ್ನು ಜಾಗರೂಕತೆಯಿಂದ ಇಟ್ಟುಕೊಳ್ಳತಕ್ಕದ್ದು.

ಹೆಚ್) (i) ಅಭ್ಯರ್ಥಿಯು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಜಾಲತಾಣದಲ್ಲಿ ನಿಯಮಿತವಾಗಿ ಶಾಖಾಧಿಕಾರಿ ಹುದ್ದೆಗಳ ಕುರಿತಾದ ಮಾಹಿತಿಗಾಗಿ ವೀಕ್ಷಿಸಬಹುದು.

(ii) ಸ್ಪರ್ಧಾತ್ಮಕ ಪರೀಕ್ಷೆಗೆ / ಸಂದರ್ಶನಕ್ಕೆ ಆಯ್ಕೆ ಮಾಡಲಾಗುವ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮತ್ತು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಈ ಕೆಳಗಿನ ಜಾಲತಾಣದಲ್ಲಿ ಪ್ರಕಟಿಸಲಾಗುತ್ತದೆ.

ಎ)https://cetonline.karnataka.gov.in/kea/indexnew

ಮತ್ತು

ಬಿ) https://karnataka.nalsa.gov.in

(iii) ಅರ್ಹ ಅಭ್ಯರ್ಥಿಗಳಿಗೆ ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ನಮೂದಿಸಿದ ಇ-ಮೇಲ್ ಐಡಿ ಹಾಗೂ ಮೊಬೈಲ್ ಸಂಖ್ಯೆಗೆ ಇ-ಮೇಲ್/ಎಸ್‌ಎಂಎಸ್/ವಾಟ್ಸ್‌ಆಪ್ ಮುಖಾಂತರ ಮಾಹಿತಿಯನ್ನು ಕಳುಹಿಸಲಾಗುತ್ತದೆ.

ಐ) ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ, ಅಂತಿಮವಾಗಿ ಸಲ್ಲಿಸಿದ ಅರ್ಜಿಯನ್ನು ಮಾತ್ರ ಪರಿಗಣಿಸಲಾಗುತ್ತದೆ. **ಕೊನೆಯದಾಗಿ ಸಲ್ಲಿಸಿದ ಅರ್ಜಿಯನ್ನು ಬಿಟ್ಟು ಉಳಿದ ಅರ್ಜಿಗಳು ತಿರಸ್ಕೃತವಾಗುತ್ತವೆ ಮತ್ತು ಈ ಸಂಬಂಧ ಯಾವುದೇ ಕೋರಿಕೆಯನ್ನು ಪರಿಗಣಿಸುವುದಿಲ್ಲ.**

ಜೆ) ಅಭ್ಯರ್ಥಿಯು ಸ್ಪರ್ಧಾತ್ಮಕ ಪರೀಕ್ಷೆಗೆ ಮತ್ತು ಸಂದರ್ಶನಕ್ಕೆ ತಮ್ಮ ಸ್ವಂತ ಖರ್ಚಿನಲ್ಲೇ ಹಾಜರಾಗತಕ್ಕದ್ದು.

## V. ಮೀಸಲಾತಿ ಕೋರುವ ಅಭ್ಯರ್ಥಿಗಳು ಹೊಂದಿರಬೇಕಾದ ದಾಖಲೆಗಳು :

| | | | |
|---|---|---|---|
| ಜಾತಿ ಮೀಸಲಾತಿ | (1) | ಅಭ್ಯರ್ಥಿಯು ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕದಂದು ನಿಗದಿತ ನಮೂನೆಯಲ್ಲಿ ಪ್ರಮಾಣಪತ್ರವನ್ನು ಹೊಂದಿರಬೇಕು. | |
| | (2) | ಜಾತಿ ಪ್ರಮಾಣಪತ್ರದ ನಿಗದಿತ ನಮೂನೆ: | |
| | | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ | ನಮೂನೆ – ಡಿ |
| | | ಪ್ರವರ್ಗ-I | ನಮೂನೆ – ಇ |
| | | ಪ್ರವರ್ಗ- II(A)/ II(B)/ III(A)/ III(B) | ನಮೂನೆ – ಎಫ್ |

## VI. ಇತರೆ ಮೀಸಲಾತಿ ಕೋರುವ ಅಭ್ಯರ್ಥಿಗಳು ಹೊಂದಿರಬೇಕಾದ ದಾಖಲೆಗಳು:

| | | |
|---|---|---|
| ಗ್ರಾಮೀಣ ಮೀಸಲಾತಿ | (1) | ಅಭ್ಯರ್ಥಿಯು ಗ್ರಾಮೀಣ ಪ್ರದೇಶದಲ್ಲಿ 1 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿರಬೇಕು. |
| | (2) | ಸಾಮಾನ್ಯ ವರ್ಗಕ್ಕೆ ಸೇರಿದ ಮತ್ತು ಗ್ರಾಮೀಣ ಮೀಸಲಾತಿಯನ್ನು ಪಡೆಯಲು ಬಯಸುವ ಅಭ್ಯರ್ಥಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಯಿಂದ ಮೇಲು ರುಜು ಮಾಡಲಾದ ನಮೂನೆ 2 ರಲ್ಲಿ ಪ್ರಮಾಣಪತ್ರವನ್ನು ಮತ್ತು ಸಂಬಂಧಪಟ್ಟ ತಹಶೀಲ್ದಾರ್ ನೀಡಿದ ಕೆನೆಪದರಕ್ಕೆ ಸೇರಿದವರಲ್ಲ ಎಂದು ಹೇಳುವ ನಮೂನೆ 1 ರಲ್ಲಿ ಪ್ರಮಾಣಪತ್ರವನ್ನು ಸಲ್ಲಿಸಬೇಕು. |

| | | |
|---|---|---|
| | (3) | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಪ್ರವರ್ಗ–I / ಪ್ರವರ್ಗ–II(A) / II(B)/ III(A)/ III(B) ಗಳಿಗೆ ಸೇರಿದ ಅಭ್ಯರ್ಥಿಗಳು ಗ್ರಾಮೀಣ ಮೀಸಲಾತಿಯನ್ನು ಪಡೆಯಲು ಕಡ್ಡಾಯವಾಗಿ ನಮೂನೆ–2 ರಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಯಿಂದ ಮೇಲು ಸಹಿ ಮಾಡಲಾದ ಪ್ರಮಾಣಪತ್ರ.<br><br>ಯಾವುದೇ ಅಭ್ಯರ್ಥಿಯು ಸದರಿ ಪ್ರಮಾಣಪತ್ರವನ್ನು ಸಲ್ಲಿಸಲು ವಿಫಲವಾದರೆ, ಅಂತಹ ಅಭ್ಯರ್ಥಿಯು ಗ್ರಾಮೀಣ ಮೀಸಲಾತಿಯನ್ನು ಪಡೆಯಲು ಅನರ್ಹರಾಗುತ್ತಾನೆ/ಳೆ. |
| ಮಾಜಿ ಸೈನಿಕರ ಮೀಸಲಾತಿ | ಸಶಸ್ತ್ರ ಪಡೆಗಳ ಸೇವೆಯಿಂದ ಬಿಡುಗಡೆ ಅಥವಾ ವಿಮುಕ್ತಿಗೊಳಿಸಿದ ಪ್ರಮಾಣಪತ್ರ. | |
| ವಿಶೇಷ ವಿಕಲಚೇತನ ಮೀಸಲಾತಿ | ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 115 ಸೇನೆನಿ 2005 ದಿನಾಂಕ 19.11.2005 ರ ಪ್ರಕಾರ ಸಂಬಂಧಪಟ್ಟ ಪ್ರಾಧಿಕಾರವು ನೀಡಿದ ಪ್ರಮಾಣಪತ್ರ. | |
| ತೃತೀಯ ಲಿಂಗ ಅಭ್ಯರ್ಥಿಯ ಮೀಸಲಾತಿ | ತೃತೀಯ ಲಿಂಗ ವ್ಯಕ್ತಿಗಳ (ಹಕ್ಕುಗಳ ರಕ್ಷಣೆ) ಕಾಯಿದೆ, 2019ರ ಕಲಂ 6 ರ (Section 6 of the Transgender Persons (Protection of Rights) Act, 2019) ಅಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ನೀಡಿರುವ ಪ್ರಮಾಣಪತ್ರ. | |
| ಸೇವಾನಿರತ ಅಭ್ಯರ್ಥಿಗಳು | ಆಯ್ಕೆ ಪಟ್ಟಿ ಬಿಡುಗಡೆಯಾದ ತಕ್ಷಣ ಸೇವಾನಿರತ ಅಭ್ಯರ್ಥಿಗಳು ನಿರಾಪೇಕ್ಷಣಾ ಪ್ರಮಾಣಪತ್ರ (NOC)ವನ್ನು ನೇಮಕಾತಿ ಆದೇಶ ನೀಡುವ ಮೊದಲು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಚೇರಿಗೆ ಸಲ್ಲಿಸಬೇಕು. | |
| ಆನ್‌ಲೈನ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದ ನಂತರ ಪಡೆದ ಜಾತಿ ಪ್ರಮಾಣಪತ್ರ ಮತ್ತು ಇತರೆ ಮೀಸಲಾತಿಯ ಪ್ರಮಾಣಪತ್ರಗಳನ್ನು ಪರಿಗಣಿಸಲಾಗುವುದಿಲ್ಲ. | | |

(i) ಅಭ್ಯರ್ಥಿಗಳು ಕೋರಿದ ಶೈಕ್ಷಣಿಕ ಅರ್ಹತೆ, ಜಾತಿ ಮತ್ತು ಇತರೆ ಮೀಸಲಾತಿಗಳಿಗೆ ಸಂಬಂಧಿಸಿದ ಮೂಲ ದಾಖಲಾತಿಗಳನ್ನು ಸಂದರ್ಶನ/ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸಬೇಕು. ಯಾವುದೇ ಅಭ್ಯರ್ಥಿ, ಸಂದರ್ಶನ / ಪರಿಶೀಲನೆಯ ಸಮಯದಲ್ಲಿ ಮೂಲ ದಾಖಲಾತಿಗಳನ್ನು ಸಲ್ಲಿಸಲು ವಿಫಲರಾದರೆ, ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಗೊಳಿಸಿ, ಅರ್ಹರಿದ್ದಲ್ಲಿ, ಸಾಮಾನ್ಯ ವರ್ಗದ ಅಡಿಯಲ್ಲಿ ಮಾತ್ರ ಪರಿಗಣಿಸಲಾಗುವುದು.

(ii) ನಿಗದಿತವಲ್ಲದ ನಮೂನೆಯಲ್ಲಿ ಮೀಸಲಾತಿ ಪ್ರಮಾಣಪತ್ರಗಳನ್ನು ಸಲ್ಲಿಸಿದರೆ, ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**VII.** ಸ್ಪರ್ಧಾತ್ಮಕ ಪರೀಕ್ಷೆಗೆ / ಸಂದರ್ಶನಕ್ಕೆ ಕರೆಯಲಾದ ಅಭ್ಯರ್ಥಿಯು ಸೂಚನಾ ಪತ್ರದೊಂದಿಗೆ, ಮೂಲ ಗುರುತಿನ ಚೀಟಿ (ವಾಹನ ಚಾಲನಾ ಪರವಾನಗಿ/ ಆಧಾರ್ ಕಾರ್ಡ್/ ಪ್ಯಾನ್‌ಕಾರ್ಡ್/ ಪಾಸ್‌ಪೋರ್ಟ್/ವೋಟರ್ ಐಡಿ)ಯನ್ನು ಭಾಗ–ಬಿ–IV(ಇ) ನಲ್ಲಿ ಉಲ್ಲೇಖಿಸಿರುವ ಮೀಸಲಾತಿ ದಾಖಲೆಗಳೊಂದಿಗೆ ಹಾಜರಾಗಬೇಕು.

**VIII. ನಡತೆ ಪ್ರಮಾಣಪತ್ರಗಳು :**

ಎ) ಅಭ್ಯರ್ಥಿಯು ಕಾನೂನು ಪದವಿ ಪೂರ್ಣಗೊಳಿಸಿದ ಸಂಸ್ಥೆಯ ಮುಖ್ಯಸ್ಥರಿಂದ ವಿದ್ಯಾಭ್ಯಾಸದ ವಿವರಗಳೊಂದಿಗೆ ಪಡೆದ ಒಂದು ಪ್ರಮಾಣಪತ್ರ, ಮತ್ತು

ಬಿ) ಸಂಬಂಧಿಕರಲ್ಲದ ಆದರೆ ಅಭ್ಯರ್ಥಿಯೊಂದಿಗೆ ಚಿರಪರಿಚಿತರಾಗಿರುವ ಇಬ್ಬರು ಗೌರವಾನ್ವಿತ ವ್ಯಕ್ತಿಗಳಿಂದ ಪಡೆದ ಎರಡು ಪ್ರಮಾಣಪತ್ರಗಳು.

**IX.** ಆನ್‌ಲೈನ್ ಅರ್ಜಿಯಲ್ಲಿ ಮತ್ತು ಪರಿಶೀಲನೆಯ ಸಮಯದಲ್ಲಿ ಸಲ್ಲಿಸಲಾಗುವ ಮೂಲ ದಾಖಲೆಗಳಲ್ಲಿ ಯಾವುದೇ ವ್ಯತ್ಯಾಸಗಳು ಕಂಡುಬಂದರೆ, ಅಭ್ಯರ್ಥಿಯ ಉಮೇದುವಾರಿಕೆಯನ್ನು ರದ್ದುಗೊಳಿಸಲಾಗುವುದು.

**X.** ಸ್ಪರ್ಧಾತ್ಮಕ ಪರೀಕ್ಷೆಗೆ / ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ನೇಮಕಾತಿಗೆ ಯಾವುದೇ ಹಕ್ಕನ್ನು ನೀಡಿದಂತಾಗುವುದಿಲ್ಲ ಮತ್ತು ಅಭ್ಯರ್ಥಿಯು ನೇಮಕಕ್ಕೆ ಎಲ್ಲಾ ರೀತಿಯಲ್ಲಿ ಸೂಕ್ತ ಮತ್ತು ಅಗತ್ಯವೆಂದು ಪರಿಗಣಿಸಬಹುದಾದ ವಿಚಾರಣೆಗಳ ನಂತರ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ತೃಪ್ತಿ ಹೊಂದದ ಹೊರತು ಯಾವುದೇ ಅಭ್ಯರ್ಥಿಯನ್ನು ಹುದ್ದೆಗೆ ನೇಮಿಸಲಾಗುವುದಿಲ್ಲ.

**XI.** ಶಾಖಾಧಿಕಾರಿ ಹುದ್ದೆಗೆ ನೇಮಕಗೊಂಡ ಅಭ್ಯರ್ಥಿಯನ್ನು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಅಥವಾ ರಾಜ್ಯದ ಯಾವುದೇ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಛೇರಿಗೆ ನಿಯುಕ್ತಿಗೊಳಿಸಬಹುದಾಗಿರುತ್ತದೆ.

**XII.** ನೇಮಕಾತಿ ಪ್ರಕ್ರಿಯೆಯಲ್ಲಿ ಯಾವುದೇ ಅಭ್ಯರ್ಥಿಯು ಪ್ರಭಾವ ಬೀರಲು ಪ್ರಯತ್ನಿಸಿದ್ದಲ್ಲಿ, ನೇಮಕಾತಿಗೆ ಅನರ್ಹನಾಗುತ್ತಾನೆ/ಳೆ.

**XIII.** ಒಂದು ವೇಳೆ ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಅಧಿಸೂಚನೆಗಳ ನಡುವೆ ಯಾವುದೇ ಅಸಂಗತತೆ ಉಂಟಾದರೆ, ಇಂಗ್ಲೀಷ್ ಆವೃತ್ತಿಯ ಅಧಿಸೂಚನೆ ಮಾನ್ಯವಾಗುತ್ತದೆ.

**XIV.** ನೇಮಕಾತಿಯ/ಪರಿಶೀಲನೆ ಹಂತದಲ್ಲಿ ಅಥವಾ ನೇಮಕಾತಿಯ ನಂತರ ಅಭ್ಯರ್ಥಿಯು ಅರ್ಜಿಯಲ್ಲಿ ಒದಗಿಸಿರುವ ಮಾಹಿತಿಯು ಸುಳ್ಳು ಎಂದು ಕಂಡುಬಂದಲ್ಲಿ ಅಥವಾ ಅಭ್ಯರ್ಥಿಯು ಯಾವುದೇ ಅರ್ಹತಾ ಮಾನದಂಡಗಳನ್ನು ಪೂರೈಸದಿದ್ದಲ್ಲಿ ಅಥವಾ ಅಭ್ಯರ್ಥಿಯು ಯಾವುದೇ ವಸ್ತುನಿಷ್ಠ ಸತ್ಯಗಳನ್ನು ತಿರುಚಿದರೆ ಅಥವಾ ಮೊಟಕುಗೊಳಿಸಿದರೆ, ಅಭ್ಯರ್ಥಿಯ ಉಮೇದುವಾರಿಕೆಯನ್ನು ರದ್ದುಗೊಳ್ಳುತ್ತದೆ.

**XV.** ಸುಳ್ಳು ಅಥವಾ ತಪ್ಪಾದ ಮಾಹಿತಿಯನ್ನು ಒದಗಿಸಿದಂತಹ ಅಭ್ಯರ್ಥಿಯು ಅನರ್ಹತೆಗೆ ಒಳಪಡುವುದಲ್ಲದೆ ಕ್ರಿಮಿನಲ್ ಮೊಕದ್ದಮೆಗೆ ಹೊಣೆಗಾರನಾಗುತ್ತಾನೆ/ಳೆ.

ಗೌರವಾನಿತ ಕಾರ್ಯನಿರ್ವಾಹಕ ಅಧ್ಯಕ್ಷರು,
ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರರವರ
ಆದೇಶಾನುಸಾರ

ಸಹಿ/–
**(ಹೆಚ್. ಶಶಿಧರ ಶೆಟ್ಟಿ)**
ಸದಸ್ಯ ಕಾರ್ಯದರ್ಶಿ,
ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ,
ಬೆಂಗಳೂರು

# KARNATAKA STATE LEGAL SERVICES AUTHORITY, BENGALURU

## NOTIFICATION

## NO: KSLSA/O3/ADM/SO/2026 DATED 20.07.2026

## DIRECT RECRUITMENT OF THE CANDIDATES TO THE POSTS OF SECTION OFFICER

## <u>UNDER KALYANA KARNATAKA REGION</u>

## LAST DATE FOR SUBMISSION OF APPLICATION THROUGH ONLINE: 19.08.2026

It is hereby notified that the online application is invited from the candidate, who fulfills the essential qualifications and other eligibility conditions prescribed below, for recruitment to **02** posts of **Section Officer**, by way of Direct Recruitmentunder Kalyana Karnataka Region in the Karnataka State Legal Services Authority, Bengaluru.

**This Notification/Recruitment is subject to the final outcome of Writ Petition No.200448/2025 c/w 17968/2025 and 3145/2023 pending before the Hon'ble High Court of Karnataka.**

## <u>PART - A</u>

### 1. <u>Classification of Vacancies:</u>

### 02 POSTS UNDER KALYANA KARNATAKA REGION

| Category | Un-reserved | Women Candidate | Rural Candidate | Kannada Medium Candidate | Persons with Benchmark Disability | Ex-servicemen | Transgender | TOTAL |
|---|---|---|---|---|---|---|---|---|
| General Merit | **01** | - | - | - | - | - | - | **01** |
| Scheduled Castes | **01** | - | - | - | - | - | - | **01** |
| Scheduled Tribes | - | - | - | - | - | - | - | - |
| Category-I | - | - | - | - | - | - | - | - |
| Category-II(A) | - | - | - | - | - | - | - | - |
| Category-II(B) | - | - | - | - | - | - | - | - |
| Category-III(A) | - | - | - | - | - | - | - | - |
| Category-III(B) | - | - | - | - | - | - | - | - |
| **TOTAL** | **02** | - | - | - | - | - | - | **02** |

**Note:**

1. The classification is made on the basis of Government Order No. DPAR 02 SeHiMa 2026 dated 13.05.2026 and Government Order No. SWD 8 SLP 2024 (Part-1), dated 22.05.2026.
2. The Government Circular No. DPAR/63/HKQ/2019, dated 15.06.2022.

## 2. Scale of Pay:

69250-1650-74200-1900-85600-2300-99400-2700-115600-3100-134200

## 3. Method of Recruitment:

Selection of candidates will be made in accordance with;

a) The Legal Services Authorities Act, 1987.

b) The Karnataka State Legal Services Authority Rules, 1996.

c) The Karnataka State Legal Services Authority Regulations, 1997.

d) The Karnataka Civil Services (General Recruitment) Rules, 1977, as amended from time to time

e) The Karnataka Scheduled Castes, Scheduled Tribes and other Backward Classes (Reservation of Appointment, etc.) Act, 1990.

f) The Karnataka Scheduled Castes, Scheduled Tribes and other Backward Classes (Reservation of Appointment, etc.) Rules, 1992.

g) The Government Circulars/Notifications are as under:

| Sl. No. | Government Circulars / Notifications | Date | Subject |
|---|---|---|---|
| 1. | DPAR 262 SRR 2025 | 29.01.2026 | Providing Age Relaxation of 5 years (as a one time measure) |
| 2. | DPAR 19 SRR 2020 | 12.10.2020 | Regarding No Objection Certificate (NOC) in respect of In-service candidate. |

## 4. (a) Qualification:

Must have passed LL.B from recognized University.

**(b) Age Limit:**

A candidate applying to the said post shall not be less than 18 years of age and must not have completed the maximum age limit fixed in the second column in the table below, as on 20.07.2026.

| Candidates Belonging to | Maximum Age Limit |
|---|---|
| General Merit | 40 years |
| Category - II(A)/ II(B)/ III(A)/ III(B) of Other Backward Classes | 43 years |
| Scheduled Caste/ Scheduled Tribe/ Category–I of Other Backward Classes | 45 years |
| Additional age relaxation will be provided to **other categories** as per the Karnataka Civil Services (General Recruitment) Rules, 1977 (as amended from time to time.) | |

## 5. Application Fee:

The candidate shall pay the application fee through UPI/Net Banking/Debit Card payment gateway as mentioned in the online application. The fee prescribed for the candidate/s is as under:

| Candidates belonging to | Application Fee |
|---|---|
| General Merit/ Category - II(A)/ II(B)/ III(A)/ III(B) of Other Backward Classes | Rs.1,000/- |
| Scheduled Caste/ Scheduled Tribe/ Category–I of Other Backward Classes/ Persons with Benchmark Disability. | Rs.500/- |

**Note:**

1. ***The applications already filed, pursuant to earlier Notification, shall be treated as the applications under the present Notification subject to qualification prescribed. Such applicant need not file fresh application. In case any person is found to be age barred, such application will be rejected and the application fee paid will be refunded.***
2. Fee once paid will not be refunded under any circumstances even in case, fee has been paid for more than one application.
3. To avoid last minute rush, the candidate is advised to submit the application through online well in advance.

4. The candidate can submit application and make payment of application fee, round the clock, till 11:59 p.m., on 19.08.2026.
5. The application which does not fulfill the prescribed requirement shall be rejected.
6. The candidate called for Interview will be informed only through e-mail/SMS/WhatsApp as registered in the application.

## 6. Probation:

A candidate selected and appointed would be on probation for a period of two years, or for such extended period.

## 7. Mode of Selection:

Through Competitive Examination and Interview. The details of which are hereunder:

### (i) Competitive Examination Procedure:

1) The examination will be conducted through offline by way of objective type (OMR type) for Paper-I and Paper-II.
2) The examination will be conducted only at Bengaluru Centre.
3) The candidate shall download the admission card for the examination from the **Karnataka Examinations Authority Website** i.e., **https://cetonline.karnataka.gov.in/kea/indexnew**
   The candidate shall possess the downloaded admission card and the original Identity Proof (Driving License/Aadhaar Card/Pan Card/Passport/Voter ID) while appearing for the examination. Without admission card and identity proof referred to above, the candidate will not be permitted to appear for the examination.
4) The selected candidate who has not passed Kannada as the First or Second Language in the SSLC Examination conducted by the Karnataka Secondary Education Examination Board or any other examination declared equivalent to it by the State Government or in examinations higher than SSLC or has passed Kannada Language Examination (Compulsory Kannada Examination) conducted by the Commission or any other selection Authority, such candidate shall pass Kannada Language Departmental Examination conducted by Karnataka Public Service Commission and submit the passing certificate to the office of Karnataka State Legal Services Authority, Bengaluru, before completing the period of probation.

**(ii) Question Papers and Syllabus :**

| Paper | Subject | Total Questions | Duration (Hours) | Maxi-mum Marks | Mini-mum Marks |
|---|---|---|---|---|---|
| Paper-I | General knowledge:<br>• Current Affairs<br>• General Science<br>• History and Geography of Karnataka<br>• Social Science<br>• General Intellectual Ability<br>• Public Administration and Rural Development<br>• Environmental Science and Logical Thinking | 100 | 2 Hours | 300 | 105 |
| Paper-II | • The Legal Services Authorities Act, 1987<br>• The Karnataka State Legal Services Authority Rules, 1996.<br>• The Karnataka State Legal Services Authority Regulations, 1997<br>• The Karnataka Civil Services Rules as amended from time to time<br>• The Karnataka Financial Code, 1958<br>• Constitution of India<br>• Code of Civil Procedure, 1908<br>• Bharatiya Nagarika Suraksha Sanhita, 2023<br>• Bharatiya Nyaya Sanhita, 2023<br>• Bharatiya Sakshya Adhiniyam, 2023<br>• General Knowledge in Kannada Language | 100 | 2 Hours | 300 | 105 |

**(iii) Negative Valuation:**

a. In Question Paper–I & Question Paper–II of the Competitive Examination, each question has four alternative answers, and the candidate has to select only one answer. 1/4$^{th}$ (0.75) marks will be deducted for each wrong answer.

b. In the OMR Sheet, there will be a fifth option/circle for each question. For the unanswered questions, the candidate shall shade the fifth option/circle. If any of the option/circle is not shaded, then 1/4$^{th}$ (0.75) marks for such question will be deducted.

c. An additional 05 minutes will be given after the last bell to shade fifth option, to avoid negative valuation.

### (iv) Interview:

The successful candidate in the Competitive Examination will be called for Interview in the ratio of 1:5 in each of the reserved category. The marks for the interview is as under:

| Particulars | Maximum Marks | Minimum marks |
|---|---|---|
| Interview (Viva-Voce) | 25 | 13 |

## PART-B

### I. General Instructions :

The candidate shall read all the instructions before submitting the online application.

While submitting application through online, the candidate shall ensure that he / she fulfills the eligibility criteria and other norms and that all the particulars furnished by the candidate are correct in all aspects and shall possess all the relevant marks cards and documents relating to educational qualifications / reservations.

### II. Eligibility Criteria:

i. The candidate must be an Indian citizen.

ii. A male candidate having more than one living wife and a female candidate already married to a person who has another wife shall not to be eligible for appointment without obtaining the prior approval from the Government.

iii. The candidate, who is not claiming any relaxation under benchmark disability, should be mentally and physically fit and free from any physical defect likely to interfere with efficient performance of the duties. If the Medical Board is of the opinion that the candidate is not physically and mentally fit, the Karnataka State Legal Services Authority shall have the power to cancel the appointment of such candidate.

iv. A person who has been permanently debarred from examination or recruitment conducted by the Central or the State of Karnataka or other State Public Service Commission or Karnataka Examinations Authority or any University, will not be eligible for appointment.

v. A person who has been convicted for an offence involving moral turpitude or who has been temporarily debarred or disqualified from examinations or requirements conducted by the Central or Karnataka State or any other State Public Service Commission or Karnataka Examinations Authority or any University shall not be

eligible for appointment until the Government/ Competent Authority holds him/ her eligible for appointment.

vi. There shall be no pending criminal case/s against the candidate.

## III. Telephone Number for any clarification:

Karnataka Examinations Authority Helpline No.080-23460460 (09.00 AM to 07.00 PM - on working days).

## IV. Procedure for submitting online application:

a. The candidate shall submit the online application through https://cetonline.karnataka.gov.in/kea/indexnew (**Applications sent by any mode other than online, will be rejected).**

b. The candidate shall fill all the particulars sought in the application and payment of fee shall be made in accordance with the instructions. Application once submitted cannot be modified.

c. The candidate shall provide the Postal Address, Mobile number and valid e-mail ID mandatorily at relevant columns for the purpose of communication, while submitting online application. The Karnataka Examinations Authority is not responsible for non-receipt of SMS/e-mail/WhatsApp due to furnishing of incorrect information i.e., invalid Mobile Number and e-mail.

d. The candidate shall scan the latest passport size photograph with white background (having 5 cm length X 3.5 cm breadth with maximum size 50kb to 200kb) and signature on white paper in black ball point pen (having 2.5 cm length X 7.5 cm breadth with maximum size 25kb to 50kb) in jpg format and upload the same, while submitting the online application. The jpg format must be clear and visible, else the application will be rejected.

e. The candidate shall compulsorily provide the following details in the online application;

   i. Aadhaar Card Number
   ii. SSLC/10$^{th}$ Standard Registration Number
   iii. LL.B Marks Card
   iv. Caste Certificate and Income details, if applicable.
   v. Details of Certificate of reservation for Kalyana Karnataka Region (i.e., Local Cadre Article 371-J)

f. Before final submission of the online application, the candidate will be able to preview the duly filled application. Candidate is advised to take printout of the filled application for his / her record.

g. The candidate should retain the application number for generation of admission card and intimation letter from the link provided on

the Website of Karnataka Examinations Authority and for any other information regarding his / her eligibility for Interview.

h. (i) Candidate is advised to visit website of Karnataka Examinations Authority for updates regarding the recruitment to the post of Section Officer at regular intervals. The date of examination shall not be sent individually, the same will be notified in the website.

(ii) The list of eligible candidates for Interview will be published on the following websites of Karnataka Examinations Authority and Karnataka State Legal Services Authority i.e.,

a) https://cetonline.karnataka.gov.in/kea/indexnew

and

b) https://karnataka.nalsa.gov.in

(iii) Intimation for interview will be sent to the eligible candidates through SMS/e-mail/WhatsApp furnished by the candidate at the time of submission of online application.

i. In case, the candidate submits more than one online application, the last of the application submitted will be entertained. All previous application/s stand/s rejected and no correspondence will be entertained.

j. The candidates appearing for the Competitive Examination and Interview shall bear their own cost.

## V. Candidates claiming reservations shall possess:

<table>
<tr><td>Kalyana Karnataka Region ( i,e., 371-J Local Cadre)</td><td colspan="2">The eligibility certificate (Under Article 371-J) issued by the competent Authority on or before the last date for submitting online application as prescribed under the Karnataka Public Employment (Reservation in Appointment for Hyderabad Karnataka Region) (Issue of Eligibility Certificate) Rules, 2013.</td></tr>
<tr><td rowspan="2">Caste Reservation</td><td>(1)</td><td>The certificate in prescribed format as on the date of submission of application.</td></tr>
<tr><td>(2)</td><td>Prescribed format of Caste Certificate:<br><table><tr><td>Scheduled Caste / Scheduled Tribe</td><td>Form –D</td></tr><tr><td>Category – I</td><td>Form – E</td></tr><tr><td>Category-II (A) / II (B) / III (A)/ III (B)</td><td>Form – F</td></tr></table></td></tr>
</table>

## VI. Candidates claiming other reservations shall possess:

<table>
<tr><td>In-Service candidates</td><td>Candidate is required to submit No Objection Certificate (NOC) to the office of Karnataka State Legal Services Authority immediately after the issuance of selection list but the same should be submitted before the issuance of an appointment order.</td></tr>
<tr><td colspan="2">The caste and other reservation certificates which are obtained after the last date of online application will not be considered.</td></tr>
</table>

(i) The original documents in respect of educational qualification, caste and other reservations as claimed by the candidate shall be produced at the time of Interview/Verification. If any candidate, fails to produce the same at the time of Interview/ Verification, it will result in cancellation of reservation of such candidate and his/her application will be considered only under General Merit category, if he/she otherwise eligible.

(ii) Reservation Certificates submitted in formats other than prescribed will not be considered.

**VII.** Candidate called for Interview shall produce a copy of Intimation Letter along with original Proof of Identity i.e., Voter ID/Aadhaar Card/PAN Card/ Ration Card/Passport/Driving Licence and the documents supporting claim for reservation as mentioned at Part-B IV(e).

## VIII.Character Certificates:

a) One certificate issued from the Head of the Institution in which the candidate has completed LL.B with study details, and

b) Two certificates from respectable persons in the society and not being relative but who is well acquainted with the candidate.

**IX.** If any discrepancies are found in the online application and original documents submitted during verification, the candidature will be rejected.

**X.** Merely attending the Competitive Examination / Interview shall not confer any right of appointment and no candidate shall be appointed to the post unless the Karnataka State Legal Services Authority is

satisfied, after such enquiries as may be considered necessary that the candidate is suitable in all respects for appointment to the post.

**XI**. The candidate appointed to the post of Section Officer will be posted in the office of the Karnataka State Legal Services Authority or any of the District Legal Services Authorities in the State.

**XII**. If any candidate attempts to influence the selection process, will not be eligible for selection.

**XIII.** In the event of any inconsistency between Kannada and English version of this notification, the English version shall prevail.

**XIV.** On verification, at any stage of recruitment or after appointment, if it is found that the information furnished by the candidate in the application is false or the candidate does not fulfill any of the eligibility criteria and/or that he/she has suppressed/twisted/ truncated any material facts, candidature/selection/ appointment stands cancelled.

**XV.** The candidate furnishing false or incorrect information would not only incur disqualification but also liable for criminal prosecuion.

BY ORDER OF HON'BLE EXECUTIVE CHAIRPERSON,
KARNATAKA STATE LEGAL SERVICES AUTHORITY

Sd/-
**(H. SHASHIDHARA SHETTY)**
MEMBER SECRETARY,
KARNATAKA STATE LEGAL SERVICES AUTHORITY,
BENGALURU

**ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು.**

**ಅಧಿಸೂಚನೆ**

**ಸಂಖ್ಯೆ: ಕರಾಕಾಸೇಪ್ರಾ:03/ಎಡಿಎಮ್/ಎಸ್‌ಒ/2026 ದಿನಾಂಕ 20.07.2026**

ಶಾಖಾಧಿಕಾರಿ ಹುದ್ದೆಗಳಿಗಾಗಿ
ಅಭ್ಯರ್ಥಿಗಳ ನೇರ ನೇಮಕಾತಿ

**ಕಲ್ಯಾಣ ಕರ್ನಾಟಕ ಪ್ರದೇಶ**

**ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 19.08.2026**

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು, ಇಲ್ಲಿ **02 ಶಾಖಾಧಿಕಾರಿ ಹುದ್ದೆಗಳಿಗೆ** ಕಲ್ಯಾಣ ಕರ್ನಾಟಕ ಪ್ರದೇಶದ ಮೀಸಲಾತಿ ಅಡಿಯಲ್ಲಿ ನೇರ ನೇಮಕಾತಿಗಾಗಿ ಅರ್ಜಿಯನ್ನು ಸಲ್ಲಿಸಲು ಈ ಕೆಳಕಂಡಂತೆ ನಿಗದಿಪಡಿಸಿರುವ ಅಗತ್ಯ ಮತ್ತು ಇತರೆ ಅರ್ಹತಾ ಷರತ್ತುಗಳನ್ನು ಪೂರೈಸುವ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯನ್ನು ಸಲ್ಲಿಸಬಹುದೆಂದು ಅಧಿಸೂಚಿಸಲಾಗಿದೆ.

**ಈ ಅಧಿಸೂಚನೆಯು ಅಥವಾ ನೇಮಕಾತಿಯು ರಿಟ್ ಅರ್ಜಿ ಸಂಖ್ಯೆ 200448/2025 c/w 17968/2025 ಮತ್ತು 3145/2023 ಪ್ರಕಾರ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.**

## ಭಾಗ – ಎ

### 1. ಖಾಲಿ ಹುದ್ದೆಗಳ ವರ್ಗೀಕರಣ:

**ಕಲ್ಯಾಣ ಕರ್ನಾಟಕ ಪ್ರದೇಶದ 02 ಹುದ್ದೆಗಳು**

| ಪ್ರವರ್ಗ | ಸಾಮಾನ್ಯ ಅರ್ಹತೆ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತ ಅಭ್ಯರ್ಥಿ | ಮಾಜಿ ಸೈನಿಕ | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|
| ಸಾಮಾನ್ಯ ಅಭ್ಯರ್ಥಿ | 01 | – | – | – | – | – | – | **01** |
| ಪರಿಶಿಷ್ಟ ಜಾತಿ | 01 | – | – | – | – | – | – | **01** |
| ಪರಿಶಿಷ್ಟ ಪಂಗಡ | – | – | – | – | – | – | – | – |
| ಪ್ರವರ್ಗ–1 | – | – | – | – | – | – | – | – |
| ಪ್ರವರ್ಗ–2(ಎ) | – | – | – | – | – | – | – | – |
| ಪ್ರವರ್ಗ–2(ಬಿ) | – | – | – | – | – | – | – | – |
| ಪ್ರವರ್ಗ –3(ಎ) | – | – | – | – | – | – | – | – |
| ಪ್ರವರ್ಗ –3(ಬಿ) | – | – | – | – | – | – | – | – |
| **ಒಟ್ಟು** | **02** | – | – | – | – | – | – | **02** |

**ಟಿಪ್ಪಣಿ:**

1. ಮೇಲಿನ ವರ್ಗೀಕರಣವನ್ನು ಸರ್ಕಾರದ ಆದೇಶ ಸಂಖ್ಯೆ :ಸಿಆಸುಇ 02 ಸೆಹಿಮ 2026 ದಿನಾಂಕ 13.05.2026 ರ ಪ್ರಕಾರ ಮಾಡಲಾಗಿದೆ ಮತ್ತು ಸರ್ಕಾರದ ಆದೇಶ ಸಂಖ್ಯೆ:ಸಕಇ 8 ಎಸ್‌ಎಲ್‌ಪಿ 2024 (ಭಾಗ–1), ದಿನಾಂಕ:22.05.2026 ರ ಪ್ರಕಾರ ಮಾಡಲಾಗಿದೆ.
2. ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ : ಸಿಆಸುಇ 03 ಹೈಕಕೊ 2019 ದಿನಾಂಕ 15.06.2022.

### 2. ವೇತನ ಶ್ರೇಣಿ:

69250–1650-74200-1900-85600-2300-99400-2700-115600-3100-134200

### 3. ನೇಮಕಾತಿಯ ವಿಧಾನ:

ಅಭ್ಯರ್ಥಿಗಳ ಆಯ್ಕೆಯನ್ನು ಈ ಕೆಳಗಿನ ನಿಯಮಗಳ ಅನುಸಾರ ಮಾಡಲಾಗುತ್ತದೆ;

ಎ) ಕಾನೂನು ಸೇವೆಗಳ ಪ್ರಾಧಿಕಾರಗಳ ಕಾಯಿದೆ, 1987.

ಬಿ) ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿಯಮಗಳು, 1996.

ಸಿ) ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿಬಂದನೆಗಳು, 1997.

ಡಿ) ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 (ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ).

ಇ) ಕರ್ನಾಟಕ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳು (ನೇಮಕಾತಿ ಮೀಸಲಾತಿ ಇತ್ಯಾದಿ) ಕಾಯಿದೆ, 1990.

ಎಫ್) ಕರ್ನಾಟಕ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳು (ನೇಮಕಾತಿ ಮೀಸಲಾತಿ ಇತ್ಯಾದಿ) ನಿಯಮಗಳು, 1992.

ಜಿ) ಈ ಕೆಳಗಿನ ಸರ್ಕಾರದ ಸುತ್ತೋಲೆಗಳು / ಅಧಿಸೂಚನೆಗಳ ಪ್ರಕಾರ :–

| **ಕ್ರಮ ಸಂಖ್ಯೆ** | **ಸರ್ಕಾರದ ಸುತ್ತೋಲೆಗಳು / ಅಧಿಸೂಚನೆಗಳು** | **ದಿನಾಂಕ** | **ವಿಷಯ** |
|---|---|---|---|
| 1. | ಸಿಆಸುಇ 262 ಸೇನೆನಿ 2025 | 29.01.2026 | ವಯೋಮಿತಿಯಲ್ಲಿ 5 ವರ್ಷಗಳ ಸಡಿಲಿಕೆಯನ್ನು ನೀಡುವ ಬಗ್ಗೆ (ಒಂದು ಬಾರಿಯ ಕ್ರಮವಾಗಿ) |
| 2. | ಸಿಆಸುಇ 19 ಸೇನೆನಿ 2020 | 12.10.2020 | ಸೇವಾನಿರತ ಅಭ್ಯರ್ಥಿಯ ನಿರಾಪೇಕ್ಷಣಾ ಪ್ರಮಾಣಪತ್ರದ ಬಗ್ಗೆ. |

**4. (ಎ) ವಿದ್ಯಾರ್ಹತೆ :**

ಅಭ್ಯರ್ಥಿಯು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಕಾನೂನು ಪದವಿ (ಎಲ್‌ಎಲ್.ಬಿ) ಪಡೆದಿರಬೇಕು.

**(ಬಿ) ವಯೋಮಿತಿ:**

ಶಾಖಾಧಿಕಾರಿ ಹುದ್ದೆಗೆ ಅರ್ಜಿ ಸಲ್ಲಿಸುವ ಎಲ್ಲಾ ಪ್ರವರ್ಗದ ಅಭ್ಯರ್ಥಿಗಳು (ದಿನಾಂಕ 20.07.2026 ರಂತೆ), ಕನಿಷ್ಠ 18 ವರ್ಷಗಳಿಗಿಂತ ಕಡಿಮೆಯಿಲ್ಲದ ಮತ್ತು ಈ ಕೆಳಕಂಡಂತೆ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು:

| **ಅಭ್ಯರ್ಥಿಯು ಸೇರಿದ ವರ್ಗ** | **ಗರಿಷ್ಠ ವಯೋಮಿತಿ** |
|---|---|
| ಸಾಮಾನ್ಯ ಅಭ್ಯರ್ಥಿ | 40 ವರ್ಷಗಳು |
| ಇತರೆ ಹಿಂದುಳಿದ ವರ್ಗಗಳ ಪ್ರವರ್ಗ – II(ಎ)/ II(ಬಿ)/ III(ಎ)/ III(ಬಿ) | 43 ವರ್ಷಗಳು |
| ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಇತರೆ ಹಿಂದುಳಿದ ವರ್ಗಕ್ಕೆ ಸೇರಿದ ಪ್ರವರ್ಗ–I | 45 ವರ್ಷಗಳು |
| ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 (ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ) ರ ಪ್ರಕಾರ ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ ವಯೋಮಿತಿಯಲ್ಲಿ ಹೆಚ್ಚುವರಿ ಸಡಿಲಿಕೆ ನೀಡಲಾಗುವುದು. | |

**5. ಅರ್ಜಿ ಶುಲ್ಕ:**

ಅಭ್ಯರ್ಥಿಯು ಆನ್‌ಲೈನ್ ಅರ್ಜಿಯಲ್ಲಿ ಉಲ್ಲೇಖಿಸಿರುವಂತೆ ಯು.ಪಿ.ಐ./ ನೆಟ್ ಬ್ಯಾಂಕಿಂಗ್/ ಡೆಬಿಟ್ ಕಾರ್ಡ್ ಪಾವತಿ ಗೇಟ್‌ವೇ ಮೂಲಕ ಅರ್ಜಿ ಶುಲ್ಕವನ್ನು ಪಾವತಿಸಬೇಕು. ಅಭ್ಯರ್ಥಿಗಳಿಗೆ ನಿಗದಿಪಡಿಸಿದ ಶುಲ್ಕ ಈ ಕೆಳಗಿನಂತಿರುತ್ತದೆ:

| ಅಭ್ಯರ್ಥಿಯು ಸೇರಿದ ವರ್ಗ | ಅರ್ಜಿ ಶುಲ್ಕ |
|---|---|
| ಸಾಮಾನ್ಯ ಅಭ್ಯರ್ಥಿ/ ಇತರೆ ಹಿಂದುಳಿದ ವರ್ಗಗಳ ಪ್ರವರ್ಗ – II(ಎ)/ II(ಬಿ)/ III(ಎ)/ III(ಬಿ) | ರೂ.1,000/- |
| ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಇತರೆ ಹಿಂದುಳಿದ ವರ್ಗಕ್ಕೆ ಸೇರಿದ ಪ್ರವರ್ಗ–I ಹಾಗೂ ನಿರ್ದಿಷ್ಟ ಅಂಗವೈಕಲ್ಯವುಳ್ಳ (Persons with Benchmark Disability) ಅಭ್ಯರ್ಥಿಗಳಿಗೆ | ರೂ.500/- |

**ಸೂಚನೆಗಳು :**

1. ***ಈ ಹಿಂದೆ ಹೊರಡಿಸಲಾದ ಅಧಿಸೂಚನೆಯ ಅನ್ವಯ ಈಗಾಗಲೇ ಸಲ್ಲಿಸಲಾದ ಅರ್ಜಿಗಳನ್ನು, ನಿಗದಿಪಡಿಸಲಾದ ಅರ್ಹತೆಗಳಿಗೆ ಒಳಪಟ್ಟು ಈ ಪ್ರಸ್ತುತ ಅಧಿಸೂಚನೆಯಡಿ ಸಲ್ಲಿಸಲಾದ ಅರ್ಜಿಗಳೆಂದು ಪರಿಗಣಿಸಲಾಗುವುದು. ಅಂತಹ ಅರ್ಜಿದಾರರು ಹೊಸದಾಗಿ ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ. ಯಾವುದೇ ಅರ್ಜಿದಾರರು ನಿಗದಿತ ವಯೋಮಿತಿಯನ್ನು ಮೀರಿರುವುದು ಕಂಡುಬಂದಲ್ಲಿ, ಅವರ ಅರ್ಜಿಯನ್ನು ತಿರಸ್ಕರಿಸಲಾಗುವುದು ಹಾಗೂ ಅವರು ಪಾವತಿಸಿದ ಅರ್ಜಿ ಶುಲ್ಕವನ್ನು ಮರುಪಾವತಿಸಲಾಗುವುದು.***
2. ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಅರ್ಜಿಗಳಿಗೆ ಶುಲ್ಕವನ್ನು ಪಾವತಿಸಿದ್ದರೂ ಸಹ, ಒಮ್ಮೆ ಪಾವತಿಸಿದ ಶುಲ್ಕವನ್ನು ಯಾವುದೇ ಸಂದರ್ಭದಲ್ಲೂ ಮರುಪಾವತಿಸಲಾಗುವುದಿಲ್ಲ.
3. ಕೊನೆಯ ಕ್ಷಣದಲ್ಲಿ ಅರ್ಜಿ ಸಲ್ಲಿಸುವಾಗ ಆಗಬಹುದಾದ ಒತ್ತಡಗಳನ್ನು ತಪ್ಪಿಸಲು ಅಭ್ಯರ್ಥಿಯು ಮುಂಚಿತವಾಗಿಯೇ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವುದು.
4. ಅಭ್ಯರ್ಥಿಯು ದಿನಾಂಕ19.08.2026 ರ ರಾತ್ರಿ 11.59 ಘಂಟೆಯ ಒಳಗೆ ಶುಲ್ಕವನ್ನು ಪಾವತಿಸಿ, ಅರ್ಜಿಯನ್ನು ಸಲ್ಲಿಸಬೇಕು.
5. ನಿಗದಿತ ಅವಶ್ಯಕತೆಗಳನ್ನು ಪೂರೈಸದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
6. ಸಂದರ್ಶನಕ್ಕೆ ಕರೆಯಲ್ಪಡುವ ಅಭ್ಯರ್ಥಿಗಳಿಗೆ ಅರ್ಜಿಯಲ್ಲಿ ನೋಂದಾಯಿಸಿರುವ ಇಮೇಲ್/ಎಸ್.ಎಂ.ಎಸ್./ವಾಟ್ಸ್‌ಆಪ್ ಮೂಲಕ ಮಾತ್ರ ತಿಳಿಸಲಾಗುವುದು.

**6. ಸೇವಾ ಪರಿವೀಕ್ಷಣಾ ಅವಧಿ:**

ನೇಮಕಗೊಂಡ ಅಭ್ಯರ್ಥಿಯು ಎರಡು ವರ್ಷಗಳ ಅವಧಿಗೆಅಥವಾ ಅಗತ್ಯವಿದ್ದರೆ ವಿಸ್ತರಿಸಬಹುದಾದ ಅವಧಿಗೆ ಪರಿವೀಕ್ಷಣಾರ್ಥಿಗಳಾಗಿರುತ್ತಾರೆ.

**7. ಆಯ್ಕೆ ವಿಧಾನ:**

ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಸಂದರ್ಶನದ ವಿವರಗಳು ಈ ಕೆಳಕಂಡಂತಿವೆ:

## (i) ಸ್ಪರ್ಧಾತ್ಮಕ ಪರೀಕ್ಷಾ ವಿಧಾನ:

1. ಸ್ಪರ್ಧಾತ್ಮಕ ಪರೀಕ್ಷೆಯನ್ನು **ಆಫ್‌ಲೈನ್ ಮೂಲಕ** ವಸ್ತುನಿಷ್ಠ ಪ್ರಶ್ನೆಗಳನ್ನೊಳಗೊಂಡ ಪ್ರಶ್ನೆ ಪತ್ರಿಕೆ–1 ಮತ್ತು ಪ್ರಶ್ನೆ ಪತ್ರಿಕೆ–2ರ **ಒಎಂಆರ್ ಮಾದರಿ** (**Offline-OMR Type**) ಯಲ್ಲಿ ನಡೆಸಲಾಗುವುದು.

2. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬೆಂಗಳೂರು ಕೇಂದ್ರದಲ್ಲಿ ನಡೆಸಲಾಗುವುದು.

3. ಅಭ್ಯರ್ಥಿಗಳು ಪರೀಕ್ಷೆಯ ಪ್ರವೇಶ ಪತ್ರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್: https://cetonline.karnataka.gov.in/kea/indexnew ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು. ಅಭ್ಯರ್ಥಿಯು ಕಡ್ಡಾಯವಾಗಿ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡು ಮೂಲ ಗುರುತಿನ ಚೀಟಿ (ವಾಹನ ಚಾಲನಾ ಪರವಾನಗಿ/ ಆದಾರ್ ಕಾರ್ಡ್/ ಪ್ಯಾನ್‌ಕಾರ್ಡ್/ ಪಾಸ್‌ಪೋರ್ಟ್/ ವೋಟರ್ ಐಡಿ) ಯೊಂದಿಗೆ ಪರೀಕ್ಷಾ ಕೇಂದ್ರಕ್ಕೆ ಹೋಗಬೇಕು. ತಪ್ಪಿದ್ದಲ್ಲಿ ಪರೀಕ್ಷಾ ಕೇಂದ್ರವನ್ನು ಪ್ರವೇಶಿಸಲು ಅನುಮತಿಸಲಾಗುವುದಿಲ್ಲ.

4. ಅಭ್ಯರ್ಥಿಯು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅಥವಾ ರಾಜ್ಯ ಸರ್ಕಾರವು ಅದಕ್ಕೆ ತತ್ಸಮಾನವೆಂದು ಘೋಷಿಸಿದ ಯಾವುದೇ ಪರೀಕ್ಷೆಯಲ್ಲಿ ಅಥವಾ ಎಸ್.ಎಸ್.ಎಲ್.ಸಿ ಗಿಂತ ಉನ್ನತ ಮಟ್ಟದ ಪರೀಕ್ಷೆಗಳಲ್ಲಿ ಕನ್ನಡ ವಿಷಯವನ್ನು ಪ್ರಥಮ/ದ್ವಿತೀಯ ಭಾಷೆಯಾಗಿ ಅಭ್ಯಸಿಸಿದ್ದರೆ ಅಥವಾ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿ ಇಂತಹ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದರೆ ಅಥವಾ ಆಯೋಗ ಅಥವಾ ಇನ್ನಿತರ ಯಾವುದೇ ಆಯ್ಕೆ ಪ್ರಾಧಿಕಾರವು ಈ ಹಿಂದೆ ನಡೆಸಿದ ಕನ್ನಡ ಭಾಷೆಯ ಪರೀಕ್ಷೆ (ಕಡ್ಡಾಯ ಕನ್ನಡ ಪರೀಕ್ಷೆ) ಯಲ್ಲಿ ಉತ್ತೀರ್ಣರಾಗಿದ್ದರೆ, ಅಂತಹ ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ನೀಡಲಾಗುತ್ತದೆ. ಇಲ್ಲವಾದಲ್ಲಿ, ಕರ್ನಾಟಕ ಲೋಕ ಸೇವಾ ಆಯೋಗವು ನಡೆಸುವ ಕನ್ನಡ ಭಾಷಾ ಇಲಾಖಾ ಪರೀಕ್ಷೆಗೆ ಹಾಜರಾಗಿ, ಉತ್ತೀರ್ಣರಾದ ಬಗ್ಗೆ ಪ್ರಮಾಣ ಪತ್ರವನ್ನು ಪರಿವೀಕ್ಷಣಾ ಅವಧಿ ಮುಗಿಯುವುದರೊಳಗೆ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಛೇರಿಗೆ ಸಲ್ಲಿಸತಕ್ಕದ್ದು.

## (ii) ಪ್ರಶ್ನೆ ಪತ್ರಿಕೆ ಹಾಗೂ ಪಠ್ಯಕ್ರಮ:

| ಪ್ರಶ್ನೆ ಪತ್ರಿಕೆ | ವಿಷಯ | ಒಟ್ಟು ಪ್ರಶ್ನೆಗಳು | ಅವಧಿ | ಗರಿಷ್ಠ ಅಂಕಗಳು | ಕನಿಷ್ಠ ಅಂಕಗಳು |
|---|---|---|---|---|---|
| **ಪತ್ರಿಕೆ–I** | **ಸಾಮಾನ್ಯ ಜ್ಞಾನ :**<br>• ಪ್ರಚಲಿತ ವಿದ್ಯಾಮಾನಗಳು<br>• ಸಾಮಾನ್ಯ ವಿಜ್ಞಾನ<br>• ಕರ್ನಾಟಕದ ಇತಿಹಾಸ ಮತ್ತು ಭೂಗೋಳಶಾಸ್ತ್ರ<br>• ಸಮಾಜ ವಿಜ್ಞಾನ<br>• ಸಾಮಾನ್ಯ ಬೌದ್ಧಿಕ ಸಾಮರ್ಥ್ಯ<br>• ಸಾರ್ವಜನಿಕ ಆಡಳಿತ ಮತ್ತು ಗ್ರಾಮೀಣಾಭಿವೃದ್ಧಿ<br>• ಪರಿಸರ ವಿಜ್ಞಾನ ಮತ್ತು ತಾರ್ಕಿಕ ಚಿಂತನೆ | **100** | **2 ಘಂಟೆ** | **300** | **105** |

| | | | | | |
|---|---|---|---|---|---|
| ಪತ್ರಿಕೆ– II | • ಕಾನೂನು ಸೇವೆಗಳ ಪ್ರಾಧಿಕಾರಗಳ ಕಾಯಿದೆ, 1987<br>• ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿಯಮಗಳು, 1996<br>• ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿಬಂಧನೆಗಳು, 1997<br>• ಕರ್ನಾಟಕ ನಾಗರಿಕ ಸೇವಾ ನಿಯಮಗಳು (ಕಾಲಕಾಲಕ್ಕೆ ತಿದುಪಡಿ ಮಾಡಿದಂತೆ)<br>• ಕರ್ನಾಟಕ ಆರ್ಥಿಕ ಸಂಹಿತೆ, 1958<br>• ಭಾರತದ ಸಂವಿಧಾನ<br>• ಸಿವಿಲ್ ಪ್ರಕ್ರಿಯಾ ಸಂಹಿತೆ, 1908<br>• ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ, 2023<br>• ಭಾರತೀಯ ನ್ಯಾಯ ಸಂಹಿತಾ, 2023<br>• ಭಾರತೀಯ ಸಾಕ್ಷ್ಯ ಅಧಿನಿಯಮ, 2023<br>• ಕನ್ನಡ ಸಾಮಾನ್ಯ ಭಾಷಾ ಜ್ಞಾನ | **100** | **2 ಘಂಟೆ** | **300** | **105** |

## (iii) ಋಣಾತ್ಮಕ ಮೌಲ್ಯಮಾಪನ (Negative Valuation):

ಎ) ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆ ಪತ್ರಿಕೆ–1 ಮತ್ತು ಪ್ರಶ್ನೆ ಪತ್ರಿಕೆ–2 ರಲ್ಲಿ, ಪ್ರತಿಪ್ರಶ್ನೆಗೆ ನಾಲ್ಕು ಪರ್ಯಾಯ ಉತ್ತರಗಳಿದ್ದು, ಅಭ್ಯರ್ಥಿಯು ಕೇವಲ ಒಂದು ಉತ್ತರವನ್ನು ಆಯ್ಕೆ ಮಾಡತಕ್ಕದ್ದು. ಪ್ರತಿಯೊಂದು ತಪ್ಪು ಉತ್ತರಕ್ಕೆ 1/4th (0.75) ರಷ್ಟು ಅಂಕವನ್ನು ಕಡಿತಗೊಳಿಸಲಾಗುವುದು.

ಬಿ) ಒ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಪ್ರತಿಯೊಂದು ಪ್ರಶ್ನೆಗೆ 5ನೇ ಆಯ್ಕೆ/ವೃತ್ತವಿರುತ್ತದೆ. ಉತ್ತರಿಸದ ಪ್ರಶ್ನೆಗಳಿಗೆ ಅಭ್ಯರ್ಥಿಯು 5ನೇ ಆಯ್ಕೆ / ವೃತ್ತವನ್ನು ಗುರುತು ಮಾಡತಕ್ಕದ್ದು. ಒಂದು ವೇಳೆ ಯಾವುದೇ ಆಯ್ಕೆ/ವೃತ್ತವನ್ನು ಗುರುತು ಮಾಡದೇ ಇದ್ದಲ್ಲಿ ಸದರಿ ಪ್ರಶ್ನೆಗೆ 1/4th (0.75)ರಷ್ಟು ಅಂಕವನ್ನು ಕಡಿತಗೊಳಿಸಲಾಗುವುದು.

ಸಿ) ಋಣಾತ್ಮಕ ಮೌಲ್ಯಮಾಪನವನ್ನು ತಪ್ಪಿಸಲು 5ನೇ ಆಯ್ಕೆ/ ವೃತ್ತವನ್ನು ಗುರುತಿಸಲು ಕೊನೆಯ ಬೆಲ್ ಆದ ನಂತರ ಹೆಚ್ಚುವರಿ 05 ನಿಮಿಷಗಳ ಕಾಲಾವಕಾಶವನ್ನು ನೀಡಲಾಗುವುದು.

## (iv) ಸಂದರ್ಶನ:

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ವಿಯಾದ ಅಭ್ಯರ್ಥಿಗಳನ್ನು, ಪ್ರತಿ ಮೀಸಲಾತಿ ವಿಭಾಗದಲ್ಲಿ 1:5 ರ ಅನುಪಾತದಂತೆ ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನದ ಅಂಕಗಳು ಈ ಕೆಳಕಂಡಂತಿವೆ:

| ವಿವರ | ಗರಿಷ್ಟ ಅಂಕಗಳು | ಕನಿಷ್ಟ ಅಂಕಗಳು |
|---|---|---|
| ಸಂದರ್ಶನ (Viva-Voce) | 25 | 13 |

## ಭಾಗ – ಬಿ

## I. ಸಾಮಾನ್ಯ ಸೂಚನೆಗಳು:

ಅಭ್ಯರ್ಥಿಯು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಮೊದಲು ಎಲ್ಲಾ ಸೂಚನೆಗಳನ್ನು ಓದಿಕೊಳ್ಳತಕ್ಕದ್ದು.

ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸುವಾಗ, ಅಭ್ಯರ್ಥಿಯು ಅರ್ಹತಾ ಮತ್ತು ಇತರೆ ಮಾನದಂಡಗಳನ್ನು ಪೂರೈಸಿದ್ದಾರೆಂದು ಹಾಗೂ ಒದಗಿಸಿದ ಎಲ್ಲಾ ವಿವರಗಳು ಸರಿಯಾಗಿವೆಯೆಂದು ಖಚಿತಪಡಿಸಿಕೊಳ್ಳಬೇಕು. ಆನ್‌ಲೈನ್‌ನಲ್ಲಿ ಮಾಹಿತಿಯನ್ನು ಒದಗಿಸುವಾಗ ಅಭ್ಯರ್ಥಿಯು ಸಂಬಂಧಪಟ್ಟ ಅಂಕಪಟ್ಟಿಗಳು ಮತ್ತು ಶೈಕ್ಷಣಿಕ ಅರ್ಹತೆ / ಮೀಸಲಾತಿಗಳಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಹೊಂದಿರಬೇಕು.

## II. ಅರ್ಹತಾ ಷರತ್ತುಗಳು:

(i) ಅಭ್ಯರ್ಥಿಯು ಕಡ್ಡಾಯವಾಗಿ ಭಾರತೀಯ ನಾಗರಿಕನಾಗಿರಬೇಕು.

(ii) ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ನೇಮಕಾತಿಗೆ ಅರ್ಹರಾಗುವುದಿಲ್ಲ.

(iii) ಅಭ್ಯರ್ಥಿಯು ನಿರ್ದಿಷ್ಟ ಅಂಗವೈಕಲ್ಯತೆಯಡಿಯಲ್ಲಿ ವಿನಾಯಿತಿ ಕೇಳದೇ ಇದ್ದಲ್ಲಿ ಆತನು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತನಾಗಿರಬೇಕು ಹಾಗೂ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸುವ ಯಾವುದೇ ದೈಹಿಕ ನ್ಯೂನ್ಯತೆ ಇರಬಾರದು. ಒಂದು ವೇಳೆ, ವೈದ್ಯಕೀಯ ಮಂಡಳಿ ಅಭ್ಯರ್ಥಿಯು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಡತೆ ಇಲ್ಲ ಎಂದು ಅಭಿಪ್ರಾಯಪಟ್ಟಲ್ಲಿ ಅಂತಹ ಅಭ್ಯರ್ಥಿಯ ನೇಮಕಾತಿಯನ್ನು ರದ್ದುಗೊಳಿಸುವ ಅಧಿಕಾರ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಇರುತ್ತದೆ.

(iv) ಕೇಂದ್ರ ಅಥವಾ ಕರ್ನಾಟಕ ರಾಜ್ಯ ಅಥವಾ ಇತರೆ ರಾಜ್ಯದ ಲೋಕಸೇವಾ ಆಯೋಗ ಅಥವಾ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ಯಾವುದೇ ವಿಶ್ವವಿದ್ಯಾಲಯಗಳಿಂದ ನಡೆಸಲಾಗುವ ಪರೀಕ್ಷೆಗಳಿಂದ ಅಥವಾ ನೇಮಕಾತಿಗಳಿಂದ ಖಾಯಂ ಆಗಿ ಡಿಬಾರ್ ಆದ ವ್ಯಕ್ತಿಗಳು ನೇಮಕಾತಿಗೆ ಅರ್ಹರಾಗುವುದಿಲ್ಲ.

(v) ಯಾವುದೇ ನೈತಿಕ ಪರಿಭಾಷೆಯ ಶಿಕ್ಷೆಗೆ ಒಳಪಟ್ಟ ವ್ಯಕ್ತಿ ಅಥವಾ ಕೇಂದ್ರ ಅಥವಾ ಕರ್ನಾಟಕ ರಾಜ್ಯ ಅಥವಾ ಇತರೆ ರಾಜ್ಯದ ಲೋಕಸೇವಾ ಆಯೋಗ ಅಥವಾ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ಯಾವುದೇ ವಿಶ್ವವಿದ್ಯಾಲಯಗಳಿಂದ ನಡೆಸಲಾಗುವ ಪರೀಕ್ಷೆಗಳಿಂದ ಅಥವಾ ನೇಮಕಾತಿಗಳಿಂದ ತಾತ್ಕಾಲಿಕವಾಗಿ ಡಿಬಾರ್ ಆದ ಅಥವಾ ಅನರ್ಹಗೊಂಡ ವ್ಯಕ್ತಿಯು, ಸರ್ಕಾರವು ಎಲ್ಲಾ ಸಂದರ್ಭಗಳನ್ನು ಮರುಪರಿಶೀಲಿಸಿ ಅವರು ನೇಮಕಾತಿಗೆ ಅರ್ಹರೆಂದು ಪರಿಗಣಿಸುವವರೆಗೂ ನೇಮಕಾತಿಗೆ ಅರ್ಹರಾಗುವುದಿಲ್ಲ.

(vi) ಅಭ್ಯರ್ಥಿಯ ವಿರುದ್ದ ಯಾವುದೇ ಕ್ರಿಮಿನಲ್ ಪ್ರಕರಣ ಇರಬಾರದು.

**III. ಸಂದೇಹ ನಿವಾರಣೆಗಾಗಿ ದೂರವಾಣಿ ಸಂಖ್ಯೆ :**

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಸಹಾಯವಾಣಿ ಸಂಖ್ಯೆ :**080–23460460**
(ಬೆಳಗ್ಗೆ 09.00 ರಿಂದ ಸಂಜೆ 07.00 ಘಂಟೆವರೆಗೆ – ಕೆಲಸದ ದಿನಗಳಲ್ಲಿ ಮಾತ್ರ)

**IV. ಅನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸುವ ವಿಧಾನ :**

ಎ) ಅಭ್ಯರ್ಥಿಯು ಆನ್‌ಲೈನ್ ಮೂಲಕ ಅರ್ಜಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ https://cetonline.karnataka.gov.in/kea/indexnew ವೆಬ್‌ಸೈಟ್‌ನಲ್ಲಿ ಸಲ್ಲಿಸತಕ್ಕದ್ದು. **(ಆನ್‌ಲೈನ್ ಹೊರತುಪಡಿಸಿ ಬೇರೆ ಯಾವುದೇ ವಿಧಾನದಿಂದ ಕಳುಹಿಸಲಾದ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ.)**

ಬಿ) ಅಭ್ಯರ್ಥಿಯು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಅಗತ್ಯವಿರುವ ಮಾಹಿತಿಯನ್ನು ಭರ್ತಿ ಮಾಡಿ, ಉಲ್ಲೇಖಿಸಲಾದ ಸೂಚನೆಗೆ ಅನುಗುಣವಾಗಿ ಶುಲ್ಕವನ್ನು ಪಾವತಿಸತಕ್ಕದ್ದು. ಒಮ್ಮೆ ಸಲ್ಲಿಸಿದ ಅರ್ಜಿಯ ತಿದ್ದುಪಡಿಗೆ ಅವಕಾಶವಿರುವುದಿಲ್ಲ.

ಸಿ) ಅಭ್ಯರ್ಥಿಯು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಸಂವಹನಕ್ಕಾಗಿ ಸಂಬಂಧಿತ ಕಾಲಂಗಳಲ್ಲಿ ಕಡ್ಡಾಯವಾಗಿ ಅವನ/ಅವಳ ಚಾಲ್ತಿಯಲ್ಲಿರುವ ಅಂಚೆ ವಿಳಾಸ, ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ಐಡಿಯನ್ನು ಒದಗಿಸಬೇಕು. ತಪ್ಪಾದ ಮಾಹಿತಿಯನ್ನು ಒದಗಿಸಿದಲ್ಲಿ ಎಸ್‌ಎಂಎಸ್/ಇ–ಮೇಲ್/ವಾಟ್ಸ್‌ಆಪ್ ಮುಖಾಂತರ ಸೂಚನೆ/ಸಂದೇಶಗಳು ಅಭ್ಯರ್ಥಿಗೆ ತಲುಪದಿದ್ದಲ್ಲಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಜವಾಬ್ದಾರರಾಗಿರುವುದಿಲ್ಲ.

ಡಿ) ಅಭ್ಯರ್ಥಿಯು ತನ್ನ ಇತ್ತೀಚಿನ ಪಾಸ್‌ಪೋರ್ಟ್ ಗಾತ್ರದ ಶ್ವೇತ ವರ್ಣದ ಹಿನ್ನಲೆಯುಳ್ಳ ಛಾಯಾಚಿತ್ರವನ್ನು ಸ್ಕ್ಯಾನ್ ಮಾಡಬೇಕು (5 ಸೆ.ಮೀ. ಉದ್ದ X 3.5 ಸೆ.ಮೀ. ಅಗಲ ಮತ್ತು ಗರಿಷ್ಠ 50 ಕೆಬಿ ಯಿಂದ 200 ಕೆಬಿ ಗಾತ್ರ) ಮತ್ತು ಕಪ್ಪು ಬಾಲ್ ಪಾಯಿಂಟ್ ಪೆನ್‌ನಲ್ಲಿ ಬಿಳಿಕಾಗದದ ಮೇಲೆ ಸಹಿಯನ್ನು (2.5 ಸೆ.ಮೀ. ಉದ್ದ X 7.5 ಸೆ.ಮೀ. ಅಗಲ ಮತ್ತು ಗರಿಷ್ಠ 25 ಕೆಬಿ ಯಿಂದ 50 ಕೆ.ಬಿ. ಗಾತ್ರ) jpg ಸ್ವರೂಪದಲ್ಲಿ ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಅಪ್‌ಲೋಡ್ ಮಾಡತಕ್ಕದ್ದು.jpgಚಿತ್ರಗಳು ಸ್ಪಷ್ಟವಾಗಿ ಕಾಣುವಂತಿರಬೇಕು, ಹಾಗೆ ಇಲ್ಲದಿದ್ದಲ್ಲಿ ಅಂತಹ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

ಇ) ಅಭ್ಯರ್ಥಿಯು ಈ ಕೆಳಗಿನ ಮಾಹಿತಿಯನ್ನು ಆನ್‌ಲೈನ್ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಕಡ್ಡಾಯವಾಗಿ ಒದಗಿಸಬೇಕು ;

(i) ಆಧಾರ್ ಕಾರ್ಡ್ ಸಂಖ್ಯೆ
(ii) ಎಸ್.ಎಸ್.ಎಲ್.ಸಿ. ಅಂಕಪಟ್ಟಿಯ ನೋಂದಣಿ ಸಂಖ್ಯೆ
(iii) ಕಾನೂನು ಪದವಿ ಅಂಕಪಟ್ಟಿಯ ವಿವರ
(iv) ಜಾತಿ ಮತ್ತು ಆದಾಯ ಪ್ರಮಾಣಪತ್ರ, ಅನ್ವಯಿಸಿದರೆ ಮಾತ್ರ
(v) ಕಲ್ಯಾಣ ಕರ್ನಾಟಕ ಪ್ರದೇಶದ ಮೀಸಲಾತಿ (371–ಜೆ ಸ್ಥಳೀಯ ವೃಂದ) ಪ್ರಮಾಣಪತ್ರ

ಎಫ್) ಆನ್‌ಲೈನ್ ಅರ್ಜಿಯನ್ನು ಅಂತಿಮವಾಗಿ ಸಲ್ಲಿಸುವ ಮೊದಲು, ಅಭ್ಯರ್ಥಿಯು ಸರಿಯಾಗಿ ಭರ್ತಿ ಮಾಡಿದ ಅರ್ಜಿಯನ್ನು ಪೂರ್ವವೀಕ್ಷಣೆ (Preview) ಮಾಡಬಹುದು. ಅಭ್ಯರ್ಥಿಯು ಭರ್ತಿ ಮಾಡಿದ ಅರ್ಜಿಯನ್ನು ತನ್ನ ದಾಖಲೆಗಾಗಿ ಮುದ್ರಿಸಿಟ್ಟುಕೊಳ್ಳತಕ್ಕದ್ದು.

ಜಿ) ಅಭ್ಯರ್ಥಿಯು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಒದಗಿಸಲಾಗುವ ಲಿಂಕ್‌ನಿಂದ ಸೂಚನಾ / ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಲು ಮತ್ತು ಸ್ಪರ್ಧಾತ್ಮಕ ಪರೀಕ್ಷೆಗೆ / ಸಂದರ್ಶನಕ್ಕೆ ಅರ್ಹತೆಯ ಕುರಿತು ಮಾಹಿತಿಗಾಗಿ ತಮ್ಮ ಅರ್ಜಿ ಸಂಖ್ಯೆಯನ್ನು ಜಾಗರೂಕತೆಯಿಂದ ಇಟ್ಟುಕೊಳ್ಳತಕ್ಕದ್ದು.

ಹೆಚ್) (i) ಅಭ್ಯರ್ಥಿಯು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಜಾಲತಾಣದಲ್ಲಿ ನಿಯಮಿತವಾಗಿ ಶಾಖಾಧಿಕಾರಿ ಹುದ್ದೆಗಳ ಕುರಿತಾದ ಮಾಹಿತಿಗಾಗಿ ವೀಕ್ಷಿಸಬಹುದು.ಪರೀಕ್ಷೆಯ ದಿನಾಂಕವನ್ನು ಯಾವುದೇ ಅಭ್ಯರ್ಥಿಗೆ ಪ್ರತ್ಯೇಕವಾಗಿ ತಿಳಿಸಲಾಗುವುದಿಲ್ಲ. ಅದನ್ನು ಅಧಿಕೃತ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

(ii) ಸ್ಪರ್ಧಾತ್ಮಕ ಪರೀಕ್ಷೆಗೆ / ಸಂದರ್ಶನಕ್ಕೆ ಆಯ್ಕೆ ಮಾಡಲಾಗುವ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮತ್ತು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಈ ಕೆಳಗಿನ ಜಾಲತಾಣದಲ್ಲಿ ಪ್ರಕಟಿಸಲಾಗುತ್ತದೆ.

ಎ)https://cetonline.karnataka.gov.in/kea/indexnew

ಮತ್ತು

ಬಿ) https://karnataka.nalsa.gov.in

(iii) ಅರ್ಹ ಅಭ್ಯರ್ಥಿಗಳಿಗೆ ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ನಮೂದಿಸಿದ ಇ-ಮೇಲ್ ಐಡಿ ಹಾಗೂ ಮೊಬೈಲ್ ಸಂಖ್ಯೆಗೆ ಇ-ಮೇಲ್/ಎಸ್‌ಎಂಎಸ್/ವಾಟ್ಸ್‌ಆಪ್ ಮುಖಾಂತರ ಮಾಹಿತಿಯನ್ನು ಕಳುಹಿಸಲಾಗುತ್ತದೆ.

ಐ) ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ, ಅಂತಿಮವಾಗಿ ಸಲ್ಲಿಸಿದ ಅರ್ಜಿಯನ್ನು ಮಾತ್ರ ಪರಿಗಣಿಸಲಾಗುತ್ತದೆ. **ಕೊನೆಯದಾಗಿ ಸಲ್ಲಿಸಿದ ಅರ್ಜಿಯನ್ನು ಬಿಟ್ಟು ಉಳಿದ ಅರ್ಜಿಗಳು ತಿರಸ್ಕೃತವಾಗುತ್ತವೆ ಮತ್ತು ಈ ಸಂಬಂಧ ಯಾವುದೇ ಕೋರಿಕೆಯನ್ನು ಪರಿಗಣಿಸುವುದಿಲ್ಲ.**

ಜೆ) ಅಭ್ಯರ್ಥಿಯು ಸ್ಪರ್ಧಾತ್ಮಕ ಪರೀಕ್ಷೆಗೆ ಮತ್ತು ಸಂದರ್ಶನಕ್ಕೆ ತಮ್ಮ ಸ್ವಂತ ಖರ್ಚಿನಲ್ಲೇ ಹಾಜರಾಗತಕ್ಕದ್ದು.

## V. ಮೀಸಲಾತಿ ಕೋರುವ ಅಭ್ಯರ್ಥಿಗಳುಹೊಂದಿರಬೇಕಾದ ದಾಖಲೆಗಳು:

| | | | |
|---|---|---|---|
| ಕಲ್ಯಾಣ ಕರ್ನಾಟಕ ಪ್ರದೇಶ (ಸ್ಥಳೀಯ ವೃಂದ) | | ಸಂವಿಧಾನದ ಅನುಚ್ಛೇದ 371-ಜೆ ಅಡಿಯಲ್ಲಿನ ಕಲ್ಯಾಣ ಕರ್ನಾಟಕ ಪ್ರದೇಶದಡಿಯಲ್ಲಿ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು, ಕರ್ನಾಟಕ ಸರ್ಕಾರಿ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶ ಅರ್ಹತಾ ಪ್ರಮಾಣ ಪತ್ರಗಳು) ನಿಯಮಗಳು, 2013ರ ಅಡಿಯಲ್ಲಿ ಗೊತ್ತುಪಡಿಸಿದಂತೆ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕ ಅಥವಾ ಅದಕ್ಕೂ ಮುಂಚಿತವಾಗಿಯೇ ಸಕ್ಷಮ ಪ್ರಾಧಿಕಾರವು ನೀಡುವ ಅರ್ಹತಾ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು. | |
| ಜಾತಿ ಮೀಸಲಾತಿ | (1) | ಅಭ್ಯರ್ಥಿಯು ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕದಂದು ನಿಗದಿತ ನಮೂನೆಯಲ್ಲಿ ಪ್ರಮಾಣಪತ್ರವನ್ನು ಹೊಂದಿರಬೇಕು. | |
| | (2) | ಜಾತಿ ಪ್ರಮಾಣಪತ್ರದ ನಿಗದಿತ ನಮೂನೆ: | |
| | | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ | ನಮೂನೆ – ಡಿ |
| | | ಪ್ರವರ್ಗ-I | ನಮೂನೆ – ಇ |

| | | | |
|---|---|---|---|
| | | ಪ್ರವರ್ಗ– II(A)/ II(B)/ III(A)/ III(B) | ನಮೂನೆ – ಎಫ್ |

**VI. ಇತರೆ ಮೀಸಲಾತಿ ಕೋರುವ ಅಭ್ಯರ್ಥಿಗಳು ಹೊಂದಿರಬೇಕಾದ ದಾಖಲೆಗಳು:**

| | |
|---|---|
| ಸೇವಾನಿರತ ಅಭ್ಯರ್ಥಿಗಳು | ಆಯ್ಕೆ ಪಟ್ಟಿ ಬಿಡುಗಡೆಯಾದ ತಕ್ಷಣ ಸೇವಾನಿರತ ಅಭ್ಯರ್ಥಿಗಳು ನಿರಾಪೇಕ್ಷಣಾ ಪ್ರಮಾಣಪತ್ರ(NOC)ವನ್ನು ನೇಮಕಾತಿ ಆದೇಶ ನೀಡುವ ಮೊದಲು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಚೇರಿಗೆ ಸಲ್ಲಿಸಬೇಕು. |
| ಆನ್‌ಲೈನ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದ ನಂತರ ಪಡೆದ ಜಾತಿ ಪ್ರಮಾಣಪತ್ರ ಮತ್ತು ಇತರೆ ಮೀಸಲಾತಿಯ ಪ್ರಮಾಣಪತ್ರಗಳನ್ನು ಪರಿಗಣಿಸಲಾಗುವುದಿಲ್ಲ. | |

(i) ಅಭ್ಯರ್ಥಿಗಳು ಕೋರಿದ ಶೈಕ್ಷಣಿಕ ಅರ್ಹತೆ, ಜಾತಿ ಮತ್ತು ಇತರೆ ಮೀಸಲಾತಿಗಳಿಗೆ ಸಂಬಂಧಿಸಿದ ಮೂಲ ದಾಖಲಾತಿಗಳನ್ನು ಸಂದರ್ಶನ/ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸಬೇಕು. ಯಾವುದೇ ಅಭ್ಯರ್ಥಿ, ಸಂದರ್ಶನ / ಪರಿಶೀಲನೆಯ ಸಮಯದಲ್ಲಿ ಮೂಲ ದಾಖಲಾತಿಗಳನ್ನು ಸಲ್ಲಿಸಲು ವಿಫಲರಾದರೆ, ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಗೊಳಿಸಿ, ಅರ್ಹರಿದ್ದಲ್ಲಿ, ಸಾಮಾನ್ಯ ವರ್ಗದ ಅಡಿಯಲ್ಲಿ ಮಾತ್ರ ಪರಿಗಣಿಸಲಾಗುವುದು.

(ii) ನಿಗದಿತವಲ್ಲದ ನಮೂನೆಯಲ್ಲಿ ಮೀಸಲಾತಿ ಪ್ರಮಾಣಪತ್ರಗಳನ್ನು ಸಲ್ಲಿಸಿದರೆ, ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**VII.** ಸ್ಪರ್ಧಾತ್ಮಕ ಪರೀಕ್ಷೆಗೆ / ಸಂದರ್ಶನಕ್ಕೆ ಕರೆಯಲಾದ ಅಭ್ಯರ್ಥಿಯು ಸೂಚನಾ ಪತ್ರದೊಂದಿಗೆ, ಮೂಲ ಗುರುತಿನ ಚೀಟಿ (ವಾಹನ ಚಾಲನಾ ಪರವಾನಗಿ/ ಆದಾರ್ ಕಾರ್ಡ್/ ಪ್ಯಾನ್‌ಕಾರ್ಡ್/ಪಾಸ್‌ಪೋರ್ಟ್/ವೋಟರ್ ಐಡಿ) ಯನ್ನು ಭಾಗ–ಬಿ–IV(ಇ) ನಲ್ಲಿ ಉಲ್ಲೇಖಿಸಿರುವ ಮೀಸಲಾತಿ ದಾಖಲೆಗಳೊಂದಿಗೆ ಹಾಜರಾಗಬೇಕು.

**VIII. ನಡತೆ ಪ್ರಮಾಣಪತ್ರಗಳು:**

ಎ) ಅಭ್ಯರ್ಥಿಯು ಕಾನೂನು ಪದವಿ ಪೂರ್ಣಗೊಳಿಸಿದ ಸಂಸ್ಥೆಯ ಮುಖ್ಯಸ್ಥರಿಂದ ವಿದ್ಯಾಭ್ಯಾಸದ ವಿವರಗಳೊಂದಿಗೆ ಪಡೆದ ಒಂದು ಪ್ರಮಾಣಪತ್ರ, ಮತ್ತು

ಬಿ) ಸಂಬಂಧಿಕರಲ್ಲದ ಆದರೆ ಅಭ್ಯರ್ಥಿಯೊಂದಿಗೆ ಚಿರಪರಿಚಿತರಾಗಿರುವ ಇಬ್ಬರು ಗೌರವಾನ್ವಿತ ವ್ಯಕ್ತಿಗಳಿಂದ ಪಡೆದ ಎರಡು ಪ್ರಮಾಣಪತ್ರಗಳು.

**IX.** ಆನ್‌ಲೈನ್ ಅರ್ಜಿಯಲ್ಲಿ ಮತ್ತು ಪರಿಶೀಲನೆಯ ಸಮಯದಲ್ಲಿ ಸಲ್ಲಿಸಲಾಗುವ ಮೂಲ ದಾಖಲೆಗಳಲ್ಲಿ ಯಾವುದೇ ವ್ಯತ್ಯಾಸಗಳು ಕಂಡುಬಂದರೆ, ಅಭ್ಯರ್ಥಿಯ ಉಮೇದುವಾರಿಕೆಯನ್ನು ರದ್ದುಗೊಳಿಸಲಾಗುವುದು.

**X.** ಸ್ಪರ್ಧಾತ್ಮಕ ಪರೀಕ್ಷೆಗೆ / ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ನೇಮಕಾತಿಗೆ ಯಾವುದೇ ಹಕ್ಕನ್ನು ನೀಡಿದಂತಾಗುವುದಿಲ್ಲ ಮತ್ತು ಅಭ್ಯರ್ಥಿಯು ನೇಮಕಕ್ಕೆ ಎಲ್ಲಾ ರೀತಿಯಲ್ಲಿ ಸೂಕ್ತ ಮತ್ತು ಅಗತ್ಯವೆಂದು ಪರಿಗಣಿಸಬಹುದಾದ ವಿಚಾರಣೆಗಳ ನಂತರ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ತೃಪ್ತಿ ಹೊಂದದ ಹೊರತು ಯಾವುದೇ ಅಭ್ಯರ್ಥಿಯನ್ನು ಹುದ್ದೆಗೆ ನೇಮಿಸಲಾಗುವುದಿಲ್ಲ.

**XI.** ಶಾಖಾಧಿಕಾರಿ ಹುದ್ದೆಗೆ ನೇಮಕಗೊಂಡ ಅಭ್ಯರ್ಥಿಯನ್ನೆ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಅಥವಾ ರಾಜ್ಯದ ಯಾವುದೇ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಛೇರಿಗೆ ನಿಯುಕ್ತಿಗೊಳಿಸಬಹುದಾಗಿರುತ್ತದೆ.

**XII.** ನೇಮಕಾತಿ ಪ್ರಕ್ರಿಯೆಯಲ್ಲಿ ಯಾವುದೇ ಅಭ್ಯರ್ಥಿಯು ಪ್ರಭಾವ ಬೀರಲು ಪ್ರಯತ್ನಿಸಿದ್ದಲ್ಲಿ, ನೇಮಕಾತಿಗೆ ಅನರ್ಹನಾಗುತ್ತಾನೆ/ಳೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



**XIII.** ಒಂದು ವೇಳೆ ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಅಧಿಸೂಚನೆಗಳ ನಡುವೆ ಯಾವುದೇ ಅಸಂಗತತೆ ಉಂಟಾದರೆ, ಇಂಗ್ಲೀಷ್ ಆವೃತ್ತಿಯ ಅಧಿಸೂಚನೆ ಮಾನ್ಯವಾಗುತ್ತದೆ.

**XIV.** ನೇಮಕಾತಿಯ/ಪರಿಶೀಲನೆ ಹಂತದಲ್ಲಿ ಅಥವಾ ನೇಮಕಾತಿಯ ನಂತರ ಅಭ್ಯರ್ಥಿಯು ಅರ್ಜಿಯಲ್ಲಿ ಒದಗಿಸಿರುವ ಮಾಹಿತಿಯು ಸುಳ್ಳು ಎಂದು ಕಂಡುಬಂದಲ್ಲಿ ಅಥವಾ ಅಭ್ಯರ್ಥಿಯು ಯಾವುದೇ ಅರ್ಹತಾ ಮಾನದಂಡಗಳನ್ನು ಪೂರೈಸದಿದ್ದಲ್ಲಿ ಅಥವಾ ಅಭ್ಯರ್ಥಿಯು ಯಾವುದೇ ವಸ್ತುನಿಷ್ಠ ಸತ್ಯಗಳನ್ನು ತಿರುಚಿದರೆ ಅಥವಾ ಮೊಟಕುಗೊಳಿಸಿದರೆ, ಅಭ್ಯರ್ಥಿಯ ಉಮೇದುವಾರಿಕೆಯು ರದ್ದುಗೊಳ್ಳುತ್ತದೆ.

**XV.** ಸುಳ್ಳು ಅಥವಾ ತಪ್ಪಾದ ಮಾಹಿತಿಯನ್ನು ಒದಗಿಸಿದಂತಹ ಅಭ್ಯರ್ಥಿಯು ಅನರ್ಹತೆಗೆ ಒಳಪಡುವುದಲ್ಲದೆ ಕ್ರಿಮಿನಲ್ ಮೊಕದ್ದಮೆಗೆ ಹೊಣೆಗಾರನಾಗುತ್ತಾನೆ/ಳೆ.

ಗೌರವಾನಿತ ಕಾರ್ಯನಿರ್ವಾಹಕ ಅಧ್ಯಕ್ಷರು,
ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ರವರ ಆದೇಶಾನುಸಾರ
**ಸಹಿ/-**
**(ಹೆಚ್. ಶಶಿಧರ ಶೆಟ್ಟಿ)**
ಸದಸ್ಯ ಕಾರ್ಯದರ್ಶಿ,
ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ,
ಬೆಂಗಳೂರು

**PR-507**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-೫೯.

P S BASAVARAJU